ಅಧ್ಯಕ್ಷರು :– ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತಮ್ಮನ್ನು ಭೇಟಿ ಮಾಡಿದ್ದೆ. ನನ್ನದೂ ಒಂದು ಮನವಿ ಇದೆ.

2) ರೈತರ ಪತ್ತು ಸಾವಿರ ರೂ. ವರೆಗೆ ಸಾಲವನ್ನು ಮನ್ನಾ ಮಾಡುವುದು.

† ಶ್ರೀ ಬಿ. ಎಸ್ ಯಡಿಯೂರಪ್ಪ (ಶಿಕಾರಿಪುರ) :– ಪ್ರಜಾವಾಣಿ ಪತ್ರಿಕೆಯಲ್ಲಿ ಡಿಸೆಂಬರ್ 13 ನೇ ತಾರೀಖು ಮುಖ ಪುಟದಲ್ಲಿ ರಾಜ್ಯದ ರೈತನಿಗೆ ಅನುಕೂಲ ಆಗುವಂತಹ ಸನ್ಮಾನ್ಯ ಮುಖ್ಯಮಂತ್ರಿಗಳ ಒಂದು ಹೇಳಿಕೆ ಪ್ರಕಟ ಆಗಿದೆ. ಅದನ್ನು ನಿಲುವಳಿ ಸೂಚನೆ ಮೂಲಕ ಮಾತನಾಡಲು ಕಳಿಸಿಕೊಟ್ಟಿದ್ದೇನೆ. ರಾಜ್ಯದ ರೈತನಿಗೆ ಅನುಕೂಲ ಆಗಬೇಕು ಮತ್ತು ರಾಜ್ಯದ ರೈತರ ಬಗ್ಗೆ ಇಷ್ಟು ಕಳಕಳಿ ಇರುವಂತಹ ಸಂದರ್ಭದಲ್ಲಿ ಸಾಲಗಾರನ ಮಗನಾಗಿರುವಂತಹ ರೈತನಿಗೆ ಅನುಕೂಲ ಆಗುತ್ತದೆ ಎಂಬ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಅವರು ಏನು ಹೇಳಿದ್ದಾರೆ ಎಂದರೆ ರೈತರ 10 ಸಾವಿರ ರೂಪಾಯಿನವರೆಗೆ ಸಾಲವನ್ನು ಮನ್ನಾ ಮಾಡುವಾಗ ಆಣೆಪಾರಿ ಇತ್ಯಾದಿ ಯಾವುದೇ ಶರತ್ತು ಹಾಕದೇ ಕ್ರಮ ಕೈಗೊಳ್ಳಬೇಕೆಂದು ಇತ್ತೀಚೆಗೆ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ ಅವರನ್ನು ಭೇಟಿ ಮಾಡಿದಾಗ ಒತ್ತಾಯಿಸಿದರು ಎಂದು ಇದೆ.ನಾವು ರೈತರ ಪರವಾಗಿ ಈ ಒಂದು ಹೇಳಿಕೆಯನ್ನು ಸ್ವಾಗತ ಮಾಡುತ್ತೇವೆ. ಇವೊತ್ತು ಏನು ಆಗಿದೆ ? ಸರ್ಕಾರ ಹೇಳಿಕೆ ಕೊಟ್ಟ ಪ್ರಕಾರ 15 ಜಿಲ್ಲೆಯ 100 ತಾಲ್ಲೂಕಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇರಬೇಕಾದರೆ ಬಲತ್ಕಾರದಿಂದ ಸಾಲ ವಸೂಲಾತಿ ನಡೆಯುತ್ತಿರ. ಆದ್ದರಿಂದ ನಾನು ಹೇಳುವುದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಈ ರಾಜ್ಯದ ರೈತನ ಪರಿಸ್ಥಿತಿ ಸರಿಯಿಲ್ಲ, ಇಂತಹ ಸಂದರ್ಭದಲ್ಲಿ ಬಲಾತ್ಕಾರದಿಂದ ಸಾಲ ವಸೂಲಾತಿ ನಡೆಯುತ್ತಿದೆ.

ಅಧ್ಯಕ್ಷರು :– ಇದರ ಬಗ್ಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಕೇಂದ್ರ ಸರ್ಕಾರ ಹಾಕಿದಂತಹ ಯಾವುದೇ ಕಂಡೀಷನ್ ಇಲ್ಲದೆ ಎಲ್ಲಾ ರೀತಿಯ 10 ಸಾವಿರ ರೂಪಾಯಿನವರೆಗೆ ಸಾಲವನ್ನು ಮನ್ನಾ ಮಾಡಬೇಕು. ಅಲ್ಲಿಯವರೆಗೆ ಸಾಲ ವಸೂಲಾತಿ ತಡೆ ಆಜ್ಞೆ ನೀಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :– ನೀವು ಹೇಳಿದ್ದೀರಿ....

ಶ್ರೀ ಬಿ. ಎಸ್. ಯಡಿಯೂರಪ್ಪ :– ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು ಎಂದು ಮತ್ತೊಮ್ಮೆ ತಮ್ಮ ಮೂಲಕ ಹೇಳುತ್ತಿದ್ದೇನೆ. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರು ಇದ್ದಂತಹ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಿದೆ. ಕೇಂದ್ರ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ತಂದ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಇಂತಹ ಒಂದು ಸ್ಕೀಮ್ ಮಾಡಬೇಕು ಎಂದು ಹೇಳಿದ್ದೆ. ಇಲ್ಲಿ ಡಿಪಾಲ್ಟರ್ಸ್ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ನಮ್ಮ ರಾಜ್ಯದ ರೈತರಿಗೆ ಅನುಕೂಲ ಆಗುವಂತಹ ಸಾಲ ಮನ್ನಾ ಯೋಜನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ಒತ್ತಾಯ ಮಾಡೋಣ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಕೇಂದ್ರಕ್ಕೆ ನಿಯೋಗ ಹೋಗೋಣ ಎಂದು ಒತ್ತಾಯ ಮಾಡಿದ್ದೆ.

ಅಧ್ಯಕ್ಷರು :– ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನನ್ನದು ತಮ್ಮಲ್ಲಿ ಒಂದು ಪ್ರಾರ್ಥನೆ. ಕೇಂದ್ರ ಸರ್ಕಾರ ರೈತನ ಸಾಲ ಮನ್ನಾ ಮಾಡುವಂತಹ ಯೋಜನೆಯಲ್ಲಿ ಏನು ಕಂಡೀಷನ್ ಹಾಕದೆ ಅದರಿಂದ ರೈತನಿಗೆ ಅನುಕೂಲ ಆಗುವುದಿಲ್ಲ ಆ ಕಂಡೀಷನ್ ತೆಗೆದು ರೈತನಿಗೆ ಅನುಕೂಲ ಆಗುವಂತಹ ಒಂದು ಕ್ರಮವನ್ನು ವಿಚಾರ ಮಾಡಬೇಕಾಗಿದೆ. ಅಲ್ಲಿಯವರೆಗೆ ಕೊನೆಯ ಪಕ್ಷ ರೈತರ ಸಾಲದ ಬಗ್ಗೆ ತಡೆ ಆಜ್ಞೆ ಸರ್ಕಾರ ಕೊಡಬೇಕು. ಒಂದು ಕಡೆ ಬರಗಾಲ ಇದೆ. ಮತ್ತೊಂದು ಕಡೆ ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಇವೊತ್ತು ಕೇಂದ್ರ ಸರ್ಕಾರ ಕಾಂಗ್ರೆಸ್‌ನವರ ಬೆಂಬಲದಿಂದ ನಡೆಯುತ್ತಿರುವ ಸಂದರ್ಭದಲ್ಲಿ ಮಧ್ಯಪ್ರದೇಶ, ಹಿಮಾಚಲ ಪ್ರದೇಶದಲ್ಲಿ ಯಾವುದೇ ಕಂಡೀಷನ್ ಇಲ್ಲದೆ 2–10–1989 ರ ವರೆಗೆ ಸಣ್ಣ ರೈತರು, ದೊಡ್ಡ ರೈತರಿಗೆ ಇರುವ 10 ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಕಾರ್ಯಕ್ರಮವನ್ನು ರೂಪಿಸಬೇಕು. ಕೇಂದ್ರ ಸರಕಾರದ ಸಹಾಯ ಧನವನ್ನು ಅದಕ್ಕೆ ಪಡೆಯಿರಿ.ಅದೂ ಇಲ್ಲವಾದರೆ ನಮ್ಮ ಸರಕಾರವ ಖಜಾನೆಯಾದರೂ ಹಣವನ್ನು ತುಂಬಿ. ...

ಅಧ್ಯಕ್ಷರು :– ತಾವು ಈ ವಿಚಾರವನ್ನು ವಿಲಂಬಿಸಿಕೊಂಡು ಹೋಗುತ್ತಾ ಇದ್ದೀರಿ. ನೀವು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೀರಿ. ನಾನು ಅದರ ಬಗ್ಗೆ ನಿಮಗೆ ಈಗಾಗಲೇ ತಿಳಿಸಿದ್ದೇನೆ. ಈ ವಿಚಾರವನ್ನು ಗಮನ ಸೆಳೆಯುವ ಸೂಚನೆಯ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಇದು ನಿಲುವಳಿ ಸೂಚನೆಗೆ ತೆಗೆದುಕೊಳ್ಳಬಹುದಾದಂಥ ವಿಚಾರ. ಮಾನ್ಯ ಮುಖ್ಯಮಂತ್ರಿಯವರು ಈಗ ಸದನದಲ್ಲಿದ್ದಾರೆ. ರೈತರ ಕಷ್ಟಗಳನ್ನು ನಾವು ಅವರಿಗೆ ಹೇಳಿಕೊಳ್ಳಬಹುದು. ರೈತರು ಈಗಾಗಲೇ ಬರಗಾಲಕ್ಕೆ ತುತ್ತಾಗಿದ್ದಾರೆ. ಅವರಿಂದ ಬಲಾತ್ಕಾರವಾಗಿ ಸಾಲ

ವಸೂಲಾತಿಯನ್ನು ಮಾಡುತ್ತಾ ಇದ್ದಾರೆ. ಇಂಥ ಒಂದು ವಿಷಯವನ್ನು ನಾವು ನಿಜವಾಗಿಯೂ ಇಲ್ಲಿ 2—3 ದಿವಸಗಳ ಕಾಲ ಚರ್ಚೆ ಮಾಡಬೇಕಾಗುತ್ತದೆ. ಈ ವಿಷಯದ ವ್ಯಾಪ್ತಿಯು ಅಷ್ಟು ದೊಡ್ಡದಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಒತ್ತಾಯ ತಂದಿರುವ ಸಂದರ್ಭದಲ್ಲಿ ನಾವು ಎಲ್ಲರೂ ಸೇರಿ ಒಂದು ನಿಯೋಗವನ್ನು ದೆಲ್ಲಿಗೆ ಕೊಂಡೊಯ್ಯೋಣ. ...

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೇ, ತಮ್ಮ ನಿಲುವಳಿ ಸೂಚನೆಯನ್ನು ನಾನು ತಿರಸ್ಕರಿಸಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನನಗೆ ನಿಯಮಾನುಸಾರವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು :– ತಮಗೆ ಅದಕ್ಕೆ ಪರ್ಯಾಯವಾದಂಥ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತೇನೆ. ದಯ ಮಾಡಿ ತಾಪುಗಳು ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ...

ಶ್ರೀ ಪಾಟೀಲ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ.....ನಾನು...

ಶ್ರೀ ಬಿ. ಎಸ್. ಯಡಿಯೂರಪ್ಪ :– ಕೊನೆಯ ಪಕ್ಷ ರೈತರ ಸಾಲ ವಸೂಲಾತಿಗಾದರೂ ತಡೆ ಆಜ್ಞೆ ಕೊಡಬೇಕು. ಇಲ್ಲವಾದರೆ ಸಾಲ ವಸೂಲಾತಿಗೆ ತಡೆಯನ್ನು ಕೊಡುವವರೆಗೆ ನಾವು ಸಭೆಯಿಂದ ಹೊರಗೆ ಇರಬೇಕಾಗುತ್ತದೆ.

ಅಧ್ಯಕ್ಷರು :– ನಾನು ಹೇಳುವುದನ್ನು ದಯಮಾಡಿ ಕೇಳಬೇಕು. ನೀವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಿ. ಆದರೆ ಚೌಕಟ್ಟಿನಲ್ಲಿ ಈ ವಿಷಯ ಬರುವುದಿಲ್ಲ. ಆದುದರಿಂದ ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಮಾರ್ಪಾಡು ಮಾಡಿ ನಾಳೆ ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದಾರೆ ಎಂದು ನೀವು ಹೇಳುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಅಪೇಕ್ಷೆ ಪಟ್ಟರೆ ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಆದರೆ ತಾಪುಗಳು ಈಗ ಹೊರಗೆ ಹೋಗುವುದು ಬೇಡ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಮಾನ್ಯ ಸದಸ್ಯರು ಈಗ ಪ್ರಜಾವಾಣಿ ಪತ್ರಿಕೆಯಲ್ಲಿರುವ ಈ ವಿಚಾರವನ್ನು ಓದಿದರು. ಆದರೆ ಮಾನ್ಯ ಮುಖ್ಯಮಂತ್ರಿಯವರು ಆ ಭಾಷಣವನ್ನು ಬಿಜಾಪುರದಲ್ಲಿ ಮಾಡಿದರು ಎಂದು ನನಗೆ ನೆನಪು. ಆ ಸಂದರ್ಭದಲ್ಲಿ ಅಲ್ಲಿ ನಾನು ಇದ್ದೆ ಹಾಗೂ ಆ ಭಾಷಣವನ್ನು ಕೇಳಿಸಿಕೊಂಡಿದ್ದೇನೆ. ಭಾಷಣದಲ್ಲಿ ಅವರು ವಸೂಲಾತಿಯನ್ನು ನಿಲ್ಲಿಸಿದ್ದೇವೆ ಎಂದು ಹೇಳಿದ್ದಾರೆ. ಆದುದರಿಂದ ಆ ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿದ್ದಾರೆಯೇ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಯಡಿಯೂರಪ್ಪನವರು ಕಳೆದ ಅಧಿವೇಶನದಲ್ಲಿ ಇಲ್ಲಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಒಂದು ಮಾತನ್ನು ಹೇಳಿದ್ದರು. ರೈತರ ಸಾಲ ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಮಧ್ಯಪ್ರದೇಶದಲ್ಲಿ ಅವರ ಸರಕಾರದವರು ಕೇಂದ್ರ ಸರಕಾರದ ನೆರವನ್ನು ನೋಡದೇ ಅವರದ್ದೇ ಆದಂಥ ಆದೇಶವನ್ನು ಹೊರಡಿಸಿದ್ದಾರೆ ಎಂದಿದ್ದರು. ಅದನ್ನು ಈ ಸಂದರ್ಭದಲ್ಲಿ ಸದನಕ್ಕೆ ಪರಿಚಯ ಮಾಡಿಕೊಡುತ್ತೇನೆ ಎಂದು ಹೇಳಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಧ್ಯಪ್ರದೇಶದಲ್ಲಿ ಸುಮಾರು 750 ಕೋಟಿ ರೂಪಾಯಿಗಳಷ್ಟು ಸಹಾಯವನ್ನು ಯಾವುದೇ ಕಂಡೀಷನ್ಸ್, ಇಲ್ಲದೇ ಮನ್ನಾ ಮಾಡಿದ್ದಾರೆ. ಸದನವು ಸಮಿತಿಯು ಬೇಕಾದರೆ ಅಲ್ಲಿಗೆ ಭೇಟಿ ನೀಡಿ ನೋಡಿಕೊಂಡು ಬರಬಹುದು. 2–10–89 ರ ವರೆಗಿನ ಯಾವುದೇ ವರ್ಗದ ರೈತರ ಸಾಲವನ್ನು ಅಲ್ಲಿ ಮನ್ನಾ ಮಾಡಿದ್ದಾರೆ. ಅದೇ ರೀತಿಯ ಕಾರ್ಯಕ್ರಮವನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದೇನೆ.

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರು ಮಧ್ಯಪ್ರದೇಶದಲ್ಲಿ 750 ಕೋಟಿ ರೂಪಾಯಿಗಳ ವರೆಗೆ ಸಾಲ ಮನ್ನಾ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದುದರಿಂದ ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಅಧಿವೇಶನ ಮುಗಿದ ತಕ್ಷಣ ಹೋಗಿ ತಿಳಿದುಕೊಂಡು ಬರಬಹುದು.

12.35 ಪಿ. ಎಮ್.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅವರು ಕೃಷಿ ಸಚಿವರಾಗಿದ್ದಾಗ ಪ್ರವಾಸ ಕಾಲದಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕೆ ತಮ್ಮ ಒಪ್ಪಿಗೆ ಇದೆ ಎಂದು ಹೇಳಿದ್ದರು.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಲ್ಲ ಬರುವುದಿಲ್ಲ ಎಂಬುದನ್ನು ಯಡಿಯೂರಪ್ಪನವರು ಒಪ್ಪುವರು. ಆದರೂ ಅವರು ಪ್ರಸ್ತಾಪಿಸಿರುವುದರಿಂದ ಇದು ಪ್ರಮುಖ ವಿಷಯವೆಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲದಿರುವುದರಿಂದ ಇಲ್ಲೇ ಹಲವು ಬಾರಿ ಚರ್ಚೆಮಾಡಿದ್ದೇವೆ. ಏಕೆಂದರೆ ಇದು ಗ್ರಾಮೀಣ ಪ್ರದೇಶದ ಜನರಿಗೆ ಸಂಬಂಧಿಸಿದ್ದು. ಹಿಂದೆ ವಿ. ಪಿ. ಸಿಂಗ್‌ರವರ ಸರಕಾರ ಇದ್ದಾಗ ಒಂದು ನೀತಿ ರೂಪಿಸಿ ಎಲ್ಲ ರಾಜ್ಯ ಸರ್ಕಾರಗಳಿಗೂ ಒಪಿನಿಯನ್‌ಗಾಗಿ ಅದನ್ನು ಕಳಿಸಿತ್ತು. ಅಮೇಲೆ

ಒಂದು ಅಂತಿಮ ತೀರ್ಮಾನಕ್ಕೆ ಬಂದು ಶೇಕಡ 50 ರಷ್ಟನ್ನು ರಾಜ್ಯಸರ್ಕಾರಗಳೂ ಉಳಿದ ಶೇಕಡ 50ರ ಷ್ಟನ್ನು ಕೇಂದ್ರವೂ ಭರಿಸಬೇಕೆಂದಾಯಿತು. ಇದರ ಬಗ್ಗೆ ಜೇಕಾದಷ್ಟು ಪತ್ರವ್ಯವಹಾರವೆಲ್ಲ ನಡೆಯಿತು.ಮಾನ್ಯ ವೀರೇಂದ್ರ ಪಾಟೀಲರೂ ಆಗ ಹೇಳಿಕೆ ಕೊಟ್ಟಿದ್ದರು. ಇದರಲ್ಲಿ ಭಿನ್ನಾಭಿಪ್ರಾಯ ಇರುವುದು ಸಹಜ. ಸಾಲ ಮನ್ನಾ ಮಾಡಿದರೆ ಮುಂದೆ ರಿಫೈನಾನ್ಸ್ ಮಾಡುವುದು ಬೇಡ ? ಅದಕ್ಕೆ ನಬಾರ್ಡನವರು ಒಪ್ಪುವುದಿಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರ ತನ್ನ ಬಜೆಟಿನಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಇಟ್ಟಿದ್ದಾರೆಂದು ಕಾಣುತ್ತದೆ. ನಿಖರವಾದ ವಿವರಗಳು ನಾನಿನ್ನ ಬಳಿ ಇಲ್ಲ. ಈಗ ಏನಾಗುತ್ತಿದೆ ಎಂದರೆ ನಾನು ಹೋದ ಕಡೆಯಲ್ಲೆಲ್ಲಾ ರೈತರು ಅರ್ಜಿ ಕೊಟ್ಟಿದ್ದಾರೆ. ಅದೇನೆಂದರೆ ಕೆಲವು ಷರತ್ತು ಏನಿವೆ ಆಣೆಪಾರು ಇತ್ಯಾದಿ ಅನ್ವಯಿಸುವುದರಿಂದ ಬಹಳ ಜನ ರೈತರಿಗೆ ಉಪಯೋಗವಾಗುವುದಿಲ್ಲವೆಂದು. ಅದು ನಿಜ. ಈ ಬಗ್ಗೆ ನಾನು ಕಳೆದ ಸಲ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಈ ವಿಚಾರ ಕೂಡ ಪ್ರಸ್ತಾಪಕ್ಕೆ ಬಂತು. ಅದಕ್ಕಾಗಿಯೇ ಜನರು ಅರ್ಜಿ ಕೊಟ್ಟಾಗ ರಿಆಕ್ಟ್ ಮಾಡುವಾಗ ಪ್ರಧಾನಿಗಳ ಜೊತೆ ಮಾತಾಡಿದ್ದೇನೆಂದು ಬರೆದಿದೆ. ಅದೂ ಒಂದಲಾಗಿ ಮಾತನಾಡಿದ್ದೇನೆ. ಸಾಂದರ್ಭಿಕವಾಗಿ ಅಷ್ಟೇ. ಅವರೂ ಕೂಡ ವಿವರವಾಗಿ ಪತ್ರ ಬರೆಯಿರಿ ಎಂದು ಹೇಳಿದ್ದಾರೆ. We are going to write a detailed letter also to the Hon'ble Prime Minister.
ನಾನಿನ್ನೆ ಬರೆಯಲು ಆಗಲಿಲ್ಲ ಟೈಮ್ ಸಿಕ್ಕಿಲಿಲ್ಲ. ಮುಂದೆ ಬರೆಯುತ್ತೇನೆ. ನಮ್ಮ ಅಭಿಪ್ರಾಯ ಕೂಡ ಅಷ್ಟೇ ಕೆಲವು ಷರತ್ತುಗಳು ಏನಿವೆ ಅವುಗಳಿಂದ ರೈತರಿಗೆ ಉಪಯೋಗ ಆಗುವುದಿಲ್ಲ. ಈ ಬಗ್ಗೆ ವಿವರವಾಗಿ ಕೇಂದ್ರಕ್ಕೆ ಬರೆಯುತ್ತೇವೆ because this would ultimately help the farming community of the State who have taken loans and who have claimed benefits unce this scheme upto Rs. 10,000. ಅವರಿಗೆ ಅನುಕೂಲವಾಗಲಿ ಎಂದು ಮಾಡಿದ್ದೇವೆ. ಷರತ್ತನ್ನು ಮಾರ್ಪಾಡು ಮಾಡದಿದ್ದರೆ ರೈತರಿಗೆ ಅನುಕೂಲವಾಗುವುದಿಲ್ಲವೆಂಬುದು ಸರ್ಕಾರದ ಅಭಿಪ್ರಾಯ. ಚಂದ್ರಶೇಖರ್‌ರವರೂ ಆಸ್ಥೆ ವಹಿಸಿದ್ದಾರೆ. ವಿವರಗಳನ್ನು ಕಳುಹಿಸಿ, ಅಭ್ಯಾಸ ಮಾಡುತ್ತೇನೆ ಎಂದಿದ್ದಾರೆ. ಮುಂದೆ ಏನು ಮಾಡುತ್ತಾರೋ ನೋಡೋಣ. ಅಷ್ಟರಲ್ಲೇ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಇದೆಲ್ಲಾ ಒಂದು ತೀರ್ಮಾನಕ್ಕೆ ಬರುವವರೆಗೆ ರೈತರ ಸಾಲ ವಸೂಲಿ ಮಾಡುವುದನ್ನು ನಿಲ್ಲಿಸಿ. ತಾವು ಕೂಡ ಪ್ರಸ್ತಾಪ ಮಾಡಿದ್ದೀರಿ. ನಾವು ಕೂಡ ಮಾಡಿದ್ದೇವೆ. ಎಲ್ಲರೂ ಕೂಡಿ ಮಾಡಿರತಕ್ಕಂಥ ವಿಚಾರ ಇದು. ವಸೂಲಾತಿ ವಿಚಾರದಲ್ಲಿ ಹಿಂದೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಿಗಿದ್ದಾಗ ಹೇಳಿದ್ದಾರೆ. ಇವತ್ತು ನಾವು ಸಾಲವನ್ನು ವಸೂಲು ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ನೇರವಾಗಿ ಹೇಳಿಬಿಟ್ಟರೆ ರೀ-ಫೈನಾನ್ಸ್‌ಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ಬಹಳ ತೂಕವಾಗಿ ಆ ಸಂದರ್ಭದಲ್ಲಿ ಇಟ್ಟರು.. We appreciate that approach ಏಕೆಂದರೆ ಅತಿ ಒತ್ತಡ ಬಂದಾಗ ನಾವು ಹೇಳಿದ ಹಾಗೆ ನೀವು ಹೇಳಿದ ಹಾಗೆ ಹೇಳಿ ಬಿಡುತ್ತೇವೆ ಎಂದರೆ ಇಲ್ಲಿ ಅಂತಿಮವಾಗಿ ಕೇಂದ್ರ ಸರ್ಕಾರ ಒಪ್ಪಿರತಕ್ಕಂಥ ವಿಚಾರವಾದುದರಿಂದ ನಾವು ಸಧ್ಯಕ್ಕೆ ವಸೂಲಾತಿಯನ್ನು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ತೆಪೆದು ತಪೆದು ಅದನ್ನು ಹೇಳಿದರು. ಏಕೆಂದರೆ ನಾವು ವಸೂಲು ಮಾಡುವುದಿಲ್ಲ ಎಂದು ಹೇಳಿಬಿಟ್ಟರೆ ಸ್ಟೇಟ್ ಗೌರ್ನಮೆಂಟ್ Which is the recovery agency also. ನಮ್ಮದು ಬಂದಿರತಕ್ಕಂಥ ಹಣವನ್ನು ಕೊಡತಕ್ಕಂಥ ಒಂದು ಏಜೆನ್ಸಿ. ರಿಕವರಿಯನ್ನು ಮಾಡಿಕೊಡುವವರು ನಾವೇ. ನಾವೇ ರಿಕವರಿಯನ್ನು ಮಾಡುವುದಿಲ್ಲ ಎಂದು ಹೇಳಿದರೆ Where is the question of refinancing ? ನಬಾರ್ಡ್ ನವರು. ಅಪೆಕ್ಸ್ ಬ್ಯಾಂಕ್‌ನವರು ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಆದರೂ ಕೂಡ ಬರಗಾಲ ಬಂದಿದೆ ತೊಂದರೆಯಾಗಿದೆ ಎನ್ನುವ ದೃಷ್ಟಿಯಿಂದ ಅದನ್ನು ಮಾಡೋಣ. ಈ ರೀತಿಯಾಗಿ ಆದೇಶವನ್ನು ಕೊಡುವುದು ಬೇಡ ಎಂದು ಮಾತನಾಡಿ ನೋಡೋಣ. ನಾವು ಅದನ್ನು ಹಿರಲ್ ಆಗಿ ಇಟ್ಟುಕೊಂಡಿರುತ್ತೇವೆ ಎನ್ನತಕ್ಕಂಥ ಅಭಿಪ್ರಾಯವನ್ನು ಇಟ್ಟು ಮಾತನಾಡಿದರು. ಏಕೆಂದರೆ ನಬಾರ್ಡ್ ರೀ-ಫೈನಾನ್ಸ್ ವಿಚಾರವನ್ನು ಗಮನದಲ್ಲಿಟ್ಟುಕೊಂಡರೆ ತಾವು ಕೂಡ ಒಪ್ಪುತ್ತೀರಿ ಎನ್ನತಕ್ಕಂಥದ್ದು ಭಾವನೆ. ಆ ದೃಷ್ಟಿಯಿಂದಲೇ ಹೊರತು ರೈತರಿಗೆ ತೊಂದರೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಅಲ್ಲ. ಈ ಮಧ್ಯದಲ್ಲಿ ಹತ್ತು ಸಾವಿರ ರೂಪಾಯಿಗಳ ವಿಚಾರದಲ್ಲಿ ಸಾಲ ಮನ್ನಾದ ಬಗ್ಗೆ ಚರ್ಚೆ ಬಗ್ಗೆರೆ ಎಲ್ಲಾ ಆದರೂ ಕೂಡ ಒಂದೊಂದಾದರೂ ಕೂಡ ನಮ್ಮ ಗಮನಕ್ಕೆ ಬಂದಿದೆ. ನಾವು ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಿಲ್ಲ. ಆದರೆ ವ್ಯಾಪಕವಾಗಿಯಂತೂ ಸಾಲ ವಸೂಲಾತಿ ವಿಚಾರದಲ್ಲಿ ಚರ್ಚೆ ವಿಚಾರದಲ್ಲಿ ಅದು ಬಂದಿಲ್ಲ. ಆದರೆ ವಿಶೇಷಾದರೂ ಈ ರೀತಿ ಬಂದರೆ ಈಗಲೂ ಕೂಡ ತಾವು ನಮ್ಮ ಗಮನಕ್ಕೆ ತರಬಹುದು. ನಾವು ತಿದ್ದುಪಡಿ ನಿಲ್ಲಿಸುತ್ತೇವೆ. ಜೇರೆ ದಾರಿ ನಮಗೂ ಕೂಡ ಇಲ್ಲ. ಏಕೆಂದರೆ ಕೇಂದ್ರ ಸರ್ಕಾರದ ಅಂತಿಮ ಆದೇಶ ಇದರ ಬಗ್ಗೆ ಮಾರ್ಪಾಡು ವಿಚಾರದಲ್ಲಿ ಬರಲಿ ಎನ್ನತಕ್ಕಂಥದ್ದು ಪ್ರೊಫೆಸರ್ ಪಾಯಿಂಟ್ ಕೂಡ ಇಲ್ಲಿ ಆನ್ಸರ್ ಆಗಿದೆ. ತಮ್ಮ ಪಾಯಿಂಟ್ ಕೂಡ ಆನ್ಸರ್‌ಆಗಿದೆ ಎಂದು ನಾನು ಭಾವಿಸುತ್ತೇನೆ. ಆದುದರಿಂದ ಯಾವುದೇ ತೊಂದರೆಯಿಂದ.....

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಒಂದು ನಿಮಿಷ ಯೇಲ್ ಆದರೆ ಒಂದು ಸಿಹಿಸಾರವನ್ನು ಹೇಳುತ್ತೇನೆ. ನಾನು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ತಮಗೂ ಕೂಡ ಕಳಕಳಿ ಇದೆ. ಆದರ ಬಗ್ಗೆ ನಮ್ಮದೇನೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಇಲ್ಲಿ ಪ್ರಶ್ನೆ ಇರುವಂಥದ್ದು ಕಳೆದ ಒಂದು ವರ್ಷದಿಂದ ಈ ರೈತನ ಸಾಲವನ್ನು ಮನ್ನಾ ಮಾಡುವಂಥ ಯೋಜನೆ ಒಂದು ನಿಗಮದಿಗೆ ಹೆದ್ದಿದೆ. ಸಫ್ಲೋಸ್ ನಾಳೆ ಕೇಂದ್ರ ಸರಕಾರಕ್ಕೆ ಇವು ಒತ್ತಡವನ್ನು ತರುತ್ತಿದ್ದೀರಿ ನೀವು ಬೊಬಲವನ್ನು ಕೂಡಿತ್ತಿರತಕ್ಕಂಥ ಸರಕಾರಕ್ಕೆ ಒತ್ತಡವನ್ನು ತರುತ್ತಿದ್ದೀರಿ. ನಾವೆಲ್ಲರೂ ಒಟ್ಟಾಗಿ ಹೋದು ಪ್ರಧಾನಮಂತ್ರಿಯವರಿಗೆ ಒತ್ತಾಯವನ್ನು ತಂದು ನಮ್ಮ ರಾಜ್ಯದಲ್ಲಿ ಜಂಟಿ ಸರ್ಕಾರ ಇವ್ವಾಗ ಆಗ ಇಂಟರ್ ಸಬ್ಸಿಡಿ ಸ್ಕೀಮ್ ಇದ್ದುದರಿಂದ ಡಿಫಾಲ್ಟರ್ ಸಂಖ್ಯೆ ಕಡಿಮೆ ಇದೆ. ಯಾರು ಡೀಫಾಲ್ಟರ್ ಇದ್ದರೋ ಅವರಿಗೆ ಮಾತ್ರ ಇದರಿಂದ ಅನುಕೂಲವಾಗಿದೆ. ನೂರಕ್ಕೆ ಐದು ಜನರಿಗೆ ಕೂಡ ಇದು ಅನುಕೂಲವಾಗುವುದಿಲ್ಲ ಏನ್ನ ತಕ್ಕಂಥ ಒತ್ತಡವನ್ನು ತರತಕ್ಕಂಥ ಪ್ರಯತ್ನವನ್ನು ಮಾಡೋಣ. ಸಾಧ್ಯ ಈಗಲೇ ಆ ದಿಸೆಯಲ್ಲಿ ಪ್ರಯತ್ನವನ್ನು ಮಂಡಾಶ್ರಿದ್ದೀರಿ. ರೈತರ ಸರವಾಗಿ ತಮಗೆ ಧನ್ಯವಾದಗಳು. ಆದರೆ ಕೇಂದ್ರ ಸರ್ಕಾರ ಒಪ್ಪದಿದ್ದರೆ ಆಗ ರಾಜ್ಯ ಸರ್ಕಾರ ಇದಕ್ಕೆ ಅದರ ಬೊಕ್ಕಸದಿಂದ ಏನೂ ಕೊಟ್ಟಿಲ್ಲ. ಈಗ ಕೊಟ್ಟಿರುವ 23 ಕೋಟಿ ರೂಪಾಯಿಯೂ ನಬಾರ್ಡ್‌ನವರು ಕೊಟ್ಟರತಕ್ಕಂಥದ್ದು. ಬಹುಶಃ ಈ ದೇಶದ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕೇಂದ್ರ ಸರ್ಕಾರದ ಬಜೆಟ್ ಅಲೊಕೇಶನ್ಸ್ ತೆಗೆದುಕೊಂಡ ದುಡ್ಡಿನಲ್ಲಿ ಅತ್ಯಂತ ಕಡಿಮೆ ಹಣವನ್ನು ಪಡೆಯುವಂಥ ಯಾವ ದಾದರೂ ರಾಜ್ಯವೆಂದರೆ ಕರ್ನಾಟಕ ರಾಜ್ಯ. ಏಕೆಂದರೆ ನಮ್ಮ ಜನಸಂಖ್ಯೆ, ಕೋ-ಆಪರೇಟಿವ್ ಮೆಂಬರ್ಸ್ ಜನಸಂಖ್ಯೆ ಪ್ರಕಾರ 137 ಕೋಟಿ ರೂಪಾಯಿ ಈ ಸ್ಕೀಮ್ ಪ್ರಕಾರ ಸಾಲ ಮನ್ನಾ ಆದರೆ ಇದುವರೆಗೂ ರಾಜ್ಯ ಸರ್ಕಾರ ಕೇವಲ 26-27 ಕೋಟಿ ರೂಪಾಯಿ ಮಾತ್ರ. ಆದುದರಿಂದ ನಾಳೆ ಕೇಂದ್ರ ಸರಕಾರದ ಮನ ಒಲಿಸುವಂಥ ಪ್ರಯತ್ನವನ್ನು ಮಾಡೋಣ. ಅದು ಆಗಲಿಲ್ಲ ಎಂದರೆ ಈ ರಾಜ್ಯದ ರೈತ ಬರಗಾಲದ ಈ ಸ್ಥಿತಿಯಲ್ಲಿ ಸ್ಪಂದಿಸುವಂಥ ಈ ಸಂದರ್ಭದಲ್ಲಿ ತಾವು ಮುಂದೆ ಒಂದು ಈ ರಾಜ್ಯದ ರೈತರ ಪರವಾಗಿ ಸರ್ಕಾರದ ಬೊಕ್ಕಸದ ಹಣವನ್ನಾದರೂ ಚೆಲ್ಲಿಬಿಟ್ಟು ಈ ರಾಜ್ಯದ ರೈತ ಸಣ್ಣ ರೈತರೇ ಇರಲಿ, ದೊಡ್ಡ ರೈತನೇ ಇರಲಿ ಅವನನ್ನು ಋಣಮುಕ್ತನನ್ನಾಗಿ ಮಾಡಬೇಕು ಏನ್ನತಕ್ಕಂಥದು ಒಂದು. ಎರಡನೆಯದು ವೈಕ್ಯ ಬ್ಯಾಂಕ್ ಇಂಥ ಕಡೆ ರೈತರ ಸಾಲ ಮನ್ನಾ ಮಾಡುವುದಂಥ ಯೋಜನೆ ಇದು ರಾಷ್ಟ್ರೀಕೃತ ಬ್ಯಾಂಕ್ ಅಲ್ಲ ಎಂದು ಅನ್ಯಾಯ ಮಾಡಿಲ್ಲ. ಇಲ್ಲಿ ನಾವು ಒಂದು ಪತ್ರವನ್ನು ಬರೆಯಬೇಕಾಗುತ್ತದೆ ಒತ್ತಡವನ್ನು ತರಬೇಕಾಗುತ್ತದೆ ಏನ್ನ ತಕ್ಕಂಥದ್ದು ಒಂದೆ. ಈ ರೀತಿ ಒಂದು ವಿಶಿಷ್ಟವಾದಂಥ ಬರಗಾಲದ ಸ್ಥಿತಿಯ ವಿಶೇಷತಕ್ಕಂಥ ಸಂದರ್ಭದಲ್ಲಿ ತಾವು ಸದನಕ್ಕೆ ಭರವಸೆಯನ್ನು ಕೊಡಿ. ಮೌಖಿಕವಾಗಿ ಕೊಡಿ. ಲಿಖಿತ ಮೂಲಕ ಬೇಡ. ಅವನು ಕೃಷಿ ಕಾರ್ಮಿಕ ಇರಲಿ ಮಿನುಗಾರ ಇರಲಿ. ನೇಕಾರ ಇರಲಿ ಈ ರೀತಿ ಬ್ಯಾಂಕ್‌ನಿಂದ ಒತ್ತಡ ತಂದು ಹತ್ತು ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವಂಥ ಯಾವುದೇ ಕಂಡೀಷನ್ ಇಲ್ಲದೆ ಸಾಲ ವಸೂಲಾತಿಗೆ ತಡೆಯಾಜ್ಞೆಯನ್ನು ಕೊಡತಕ್ಕಂಥದ್ದು ಆಗಬೇಕು. ಏಕೆಂದರೆ ಎಲ್ಲಾ ಕಡೆ ನೂರಕ್ಕೆ 90 ರಷ್ಟು ಉದಾಹರಣೆಯನ್ನು ಕೊಡುತ್ತೇನೆ. ಎಲ್ಲಾ ಕಡೆಯಲ್ಲಿಯೂ ನೋಟೀಸನ್ನು ಕೊಟ್ಟು ಆಗಿದೆ. ಹರಾಜು ಎಲ್ಲಾ ಆಗಿದೆ. ಡೇಟ್ ಕೂಡ ಫಿಕ್ಸ್ ಆಗಿದೆ. ಇಂಥ ಸಂದರ್ಭದಲ್ಲಿ ದಯಮಾಡಿ ಸ್ಪಷ್ಟವಾದಂಥ ಉತ್ತರ ನಮಗೆ ತಿಳಿಸಿಂದ ಬೇಕಾಗಿದೆ. ಸಾಲವನ್ನು ವಸೂಲ ಮಾಡುವುದಿಲ್ಲ ಎಂದು ಹೇಳಬೇಕು. ಇದಕ್ಕೆ ಕೇಂದ್ರ ಸರ್ಕಾರ ಒಪ್ಪದಿದ್ದರೆ ರಾಜ್ಯ ಸರ್ಕಾರ ಹತ್ತು ಸಾವಿರ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಭರ್ತಿ ಮಾಡಿ ರೈತನನ್ನು ಋಣಮುಕ್ತನನ್ನಾಗಿ ಮಾಡಿ ಅವನ ಕಾಲಮೇಲೆ ಅವನು ನಿಲ್ಲುತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಏನ್ನತಕ್ಕಂಥ ಭರವಸೆಯನ್ನು ಕೊಟ್ಟರೆ ಇದಕ್ಕಿಂತ ಹೆಚ್ಚಿನ ಉತ್ತರವನ್ನು ನಾವು ಏನೂ ನಿರೀಕ್ಷೆ ಮಾಡುವುದಿಲ್ಲ ಸ್ವಾಮಿ.

† ಶ್ರೀ ಡಿ. ಜಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವರ್ಷದಿಂದಲೂ ಈ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ. ಮುಖ್ಯವಾಗಿ ಇರತಕ್ಕೆ ವೃತ್ತಾಸ ಏನೆಂದರೆ ಏನು ಈ ಪರಿಹಾರವನ್ನು ಹಾಕಿದ್ದಾರೆ. ಆ ಪರಿಹಾರಕ್ಕೆ ಒಳಪಟ್ಟು ಎಷ್ಟು ಜನ ಫಲಾನುಭವಿಗಳು ಬರುತ್ತಾರೆ ? ಇದುವರೆಗೂ ರಾಜ್ಯ ಸರ್ಕಾರ ಇದರ ಲೆಕ್ಕ ಕೊಡಲೇ ಇಲ್ಲ. ಒಂದು ಸಾರಿ 144 ಕೋಟಿ ರೂಪಾಯಿಯನ್ನು ಪಜಾ ಮಾಡಬೇಕಾಗುತ್ತದೆಂದು ಹೇಳಿದ್ದೀರಿ. ಆದರೆ ಫಲಾನುಭವಿಗಳು ಎಷ್ಟು ಜನ ? ಅದನ್ನಾದರೂ ಗುರುತಿಸಿದ್ದೀರಾ ? ಗುರ್ತಿಸದೆ ಇದ್ದರೆ ಗುರ್ತಿಸುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ. ಪರತ್ತುಗಳನ್ನು ತೆಗೆಯಬೇಕೆಂದು ಬರೆದಾಗ ಅದನ್ನು ಕೇಂದ್ರ ಸರ್ಕಾರ ಒಪ್ಪುತ್ತದೆಯೋ ಬಿಡುತ್ತದೆಯೋ ರಾಜ್ಯ ಸರ್ಕಾರದ ಸ್ಪಷ್ಟವಾದ ನಿಲುವು ಏನು ? ರಾಜ್ಯ ಸರ್ಕಾರ ಹಣ ಕೊಡುತ್ತದೋ ಅಥವಾ ಇಲ್ಲವೋ. ಇದೇ ಶಾಸನಸಭೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ಇದರ ತತ್ವವನ್ನು ಒಪ್ಪಿಕೊಂಡು ಇದು ಸರಿಯಾಗಿದೆ. ನಾವು ಮಾಡುತ್ತೇವೆ. ಅರ್ಧ ಭಾಗ ನಾವು ಕೊಡುತ್ತೇವೆ. ಇನ್ನು ಅರ್ಧಭಾಗ ಕೇಂದ್ರ ಸರ್ಕಾರ ಕೊಟ್ಟರೆ ಎಂದು ಹೇಳತಕ್ಕದ್ದು. ಅದನ್ನು ತಿರಸ್ಕರಿಸುವುದು. ಈ ವ್ಯವಹಾರ ಬೇರೆ ಇದರ ಪರಿಣಾಮ ಏನಾಗಿದೆ ಎಂದರೆ ಒಂದು ಕಡೆ ರೈತನ ಸಾಲ ವಸೂಲು ಆಗುತ್ತಿಲ್ಲ. ಮತ್ತೊಂದು ಕಡೆ ಸಹಕಾರ ಸಂಘಗಳು ಸತ್ತು ಮಲಗಿವೆ. ಎಲ್ಲವೂ ನಿಷ್ಕ್ರಿಯವಾಗಿಬಿಟ್ಟಿವೆ.ವಸೂಲಿ ಬರುವುದಿಲ್ಲ. ಸಂಘಗಳು ಯಾರು

ಕೊಡಬೇಕೆನ್ನುವ ಪತ್ನ ಇದೆ. ಜಿಲ್ಲಾ ಬ್ಯಾಂಕ್‌ಗಳಲ್ಲಿ ಇಟ್ಟಂತಹ ಡಿಫಾಸಿಟ್‌ಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆ. ಸಹಕಾರ ಸಂಸ್ಥೆಗಳು ಸ್ಥಗಿತವಾಗಿವೆ. 50–55 ಸಾವಿರ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಮುಂದೆ ಸರ್ಕಾರವೇ ಸಂಬಳ ಕೊಡುವ ಸಾಧ್ಯತೆ ಬರುತ್ತದೆ. ಅದಕ್ಕೆ ತಗಲತಕ್ಕ ಪೆಟ್ಟ ಮತ್ತು ಗೊಂದಲಗಳನ್ನು ಬಗೆಹರಿಸುವುದಕ್ಕೆ ಒಂದು ನಿರ್ದಿಷ್ಟವಾಗಿ ನಿಖರವಾಗಿ ನಾವು ಇಷ್ಟು ಕೊಡುತ್ತೇವೆ ಇಷ್ಟು ಕೊಡುವುದಕ್ಕೆ ಸಾಧ್ಯವಿದೆ. ಈ ಹೇಳಿಕೆಯನ್ನು ಪ್ರಧಾನ ಮಂತ್ರಿಯವರಿಗೆ ಬರೆಯುತ್ತೇವೆಂದು ಹೇಳಿದ್ದಾರೆ. ಬರೆಯುವದು ಯಾವಾಗ ? ಅದಕ್ಕೆ ಉತ್ತರ ಬರುವುದು ಯಾವಾಗ ? ಕಾಸನಸಭೆ ಮತ್ತೆ ಸೇರುವುದು ಯಾವಾಗ ? ನಾವು ಏನು ಸಾರ್ವಜನಿಕರಿಗೆ ಹೇಳಬೇಕು. ನೀವಾದರೂ ಏನು ಹೇಳುತ್ತೀರಿ. ನಾವಾದರೂ ಏನು ಹೇಳಬೇಕು. ಎಲ್ಲ ಚುನಾಯಿತ ಪ್ರತಿನಿಧಿಗಳಿಗೆ ಒತ್ತಡಗಳು ಇವೆ. ಒಂದು ಗೊಂದಲದಲ್ಲಿ ರೈತ ಸಮುದಾಯ ಇದೆ. ಇಲ್ಲದಿದ್ದರೂ ಇಲ್ಲ ಎಂದು ಹೇಳಿದಿ. ಕನಿಷ್ಟಪಕ್ಷ ವಸೂಲು ಮಾಡುವವರು ಮಾಡುತ್ತಾರೆ. ಕೊಡುವವರು ಕೊಡುತ್ತಾರೆ. ಕೊಡದೇ ಇರುವವರು ಇಲ್ಲ. ಸಹಕಾರ ಸಂಸ್ಥೆಗಳು ನಡೆಯುತ್ತಿವೆ ನಡೆಯಲಿ. ಷರತ್ತನ್ನು ತೆಗೆದು ಎಲ್ಲರಿಗೂ 10 ಸಾವಿರ ರಿಯಾಯತಿ ಕೊಡತಕ್ಕ ಆಲೋಚನೆ ಸರ್ಕಾರಕ್ಕೆ ಇದ್ದರೆ ಇದಕ್ಕೆ ತಗಲತಕ್ಕ ಮೊತ್ತ ಎಷ್ಟು ? ಅದರ ಲೆಕ್ಕ ಇದೆಯೇ ? ಷರತ್ತುಗಳನ್ನು ಬಿಳಪಡಿಸಿ ಅವರಿಗೆ 10 ಸಾವಿರ ರಿಯಾಯತಿ ಕೊಡತಕ್ಕ ವ್ಯವಸ್ಥೆ ಇದ್ದರೆ ಆ ಮೊತ್ತ ಎಷ್ಟು ? ಮತ್ತು ಅದರ ವ್ಯಾಪ್ತಿಗೆ ಬರತಕ್ಕ ಸಂಖ್ಯೆ ಎಷ್ಟು ? ಅದರ ಲೆಕ್ಕ ಇದೆಯೇ ? ಹಾಗೂ ಸದಕಾರ ಸಂಸ್ಥೆಗಳು ಏನು ಮುಳುಗುತ್ತಿವೆ ಅದನ್ನು ಉಳಿಸಿಕೊಳ್ಳುವುದಕ್ಕೆ ರೈತರ ಕಡೆಗೆ ಏನಾದರೂ ಗಮನಕೊಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ರೈತರ ಸಾಲ 8–10 ಸಾವಿರ ರೂಪಾಯಿ ಇದೆ.ಸಕ್ಕರೆ ಕಾರ್ಖಾನೆಗಳಿಗೆ ರೈತ ಕಬ್ಬನ್ನು ಹೊಡೆಯುತ್ತಾನೆ. ಆದರಿಂದ ಅವನಿಗೆ ಚೆಕ್ 8–10 ಸಾವಿರ ರೂಪಾಯಿ ಬರುತ್ತದೆ. ಆ ಚೆಕ್‌ನ್ನು ಬ್ಯಾಂಕಿಗೆ ಹಾಕಿದರೆ ಸಾಲಕ್ಕೆ ಡಿಡಕ್ಟ್ ಮಾಡಿಕೊಳ್ಳುತ್ತಾರೆ. ರೈತ ಎಲ್ಲಿಗೆ ಹೋಗಬೇಕು. ಹೇಳಿ ಫ್ಯಾಕ್ಟರಿಯವರಿಗೆ ಕೊಡಿ ಎಂದರೆ ಫ್ಯಾಕ್ಟರಿಯವರು ಕೇಳಿ ಮಾಡಿಬಿಡುತ್ತಾರೆ. ಆಥವಾ ಬ್ಯಾಂಕಿಗೆ ಕೊಟ್ಟರೆ ಬ್ಯಾಂಕಿನವರು ಅದನ್ನು ಮುರಿದುಕೊಂಡುಬಿಡುತ್ತಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಕಡೆಗೆ ತಕ್ಷಣ ಗಮನಹರಿಸಿ ಇದರ ಬಗ್ಗೆ ತಡೆ ಕೊಡಬೇಕೆಂದು ಹೇಳುತ್ತಿರುವ ಉದ್ದೇಶವೇ ಇದು. ನೀವು ತಡ ಮಾಡಿದರೆ ರಾಜ್ಯದ ರೈತ ಹಾಳಾಗಿ ಹೋಗಿಬಿಡುತ್ತಾನೆ. ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು ರಿಯಾಯತಿ ಕೊಡುವುದಿಲ್ಲ ಎಂದು ಹೇಳಿದರು. ನಾನು ಕ್ಷಮೆಯಾಚಿಸಿ ಕೇಳುತ್ತೇನೆ. ಆ ಮಾತನ್ನು ಮಾತ್ರ ಮರೆಯಬೇಡಿ ಕೊಡುತ್ತೇವೆಂದು ಹೇಳಿ ಸಾಲ ವಸೂಲಿ ನಿಲ್ಲಿಸುತ್ತೇವೆಂದು ಹೇಳಿ. ಒಂದು ಟನ್ ಕಬ್ಬಿಗೆ 100 ರೂಪಾಯಿ ಇದೆ ಅವನ್ನು 50 ರೂಪಾಯಿಗೆ ಏರಿಸಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಏನು ಹೇಳಿದೆ ಎನ್ನುವದು ಮಾನ್ಯ ಸದಸ್ಯರಿಗೆ ತಿಳಿಯದೆ ಇದ್ದರೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಅವನ್ನು ಮಾಡುತ್ತೇವೆಂದು ಹೇಳಿ ತಕ್ಷಣ ಸಾಲ ವಸೂಲಿಯನ್ನು ನಿಲ್ಲಿಸುತ್ತೇವೆಂದು ಹೇಳಿ.

ಶ್ರೀಮತಿ ಮೋಟಮ್ಮ :– ನನಗೆ ರೈತರ ಬಗ್ಗೆ ಕಾಳಜಿ ಇಲ್ಲವೇ ? ರೈತರ ಬಗ್ಗೆ ಮಾತನಾಡಲು ನನಗೆ ಹಕ್ಕಿಲ್ಲವೇ ?

ಅಧ್ಯಕ್ಷರು :– ಶ್ರೀಮತಿ ಮೋಟಮ್ಮನವರೇ ಮಾತನಾಡಿ.

ಶ್ರೀಮತಿ ಮೋಟಮ್ಮ :– ನಾವೂ ಸಹ ರೈತ ಕುಟುಂಬದಿಂದಲೇ ಬಂದಿರತಕ್ಕಂಥವರು. ಆ ಕಡೆಯವರು ಅಷ್ಟೇ ಅಲ್ಲ, ನಮ್ಮ ಕಡೆಯವರು ಇದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :– ತಮಗೆ ಮಾತನಾಡುವುದಕ್ಕೆ ಅನುಮತಿ ಇಲ್ಲ ಎಂದು ಅಲ್ಲ. ಕೊಡಬೇಕಾದವರು ಅವರು ಎಂದು ನಾವು ಹೇಳುತ್ತಿದ್ದೇವೆ. ನಾವು ಹೇಳುವ ಸ್ಥಿತಿಯಲ್ಲಿದ್ದೇವೆ ಹೇಳುತ್ತೇವೆ. ಅವರು ಕೊಡುವ ಸ್ಥಿತಿಯಲ್ಲಿದ್ದಾರೆ ತಾವೂ ಸಹಿತ ಹೇಳಿ ಕೊಡಿ. ನಿಮ್ಮನ್ನು ನಾವು ಮಾತನಾಡಬೇಡಿ ಎಂದು ಹೇಳಿಲ್ಲ.

ಶ್ರೀಮತಿ ಮೋಟಮ್ಮ :– ನಮಗೆ ಅಧಿಕಾರ ಕೊಟ್ಟರೆ ತಾನೇ ನಾವು ಹೇಳುವುದು. ಈಗ ರೈತರ ಬಗ್ಗೆ ಎಲ್ಲಾ ಕಂಟ್ರಾಕ್ಟ್ ನೀವೇ ತೆಗೆದುಕೊಂಡಿರುವ ಹಾಗೆ ಮಾತನಾಡಿದರೆ ಹೇಗೆ ? ನಮಗೂ ಅಧಿಕಾರ ಕೊಟ್ಟರೆ ನಾವು ಕೇಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನೀವು ರೈತರ ಪರವಾಗಿ ಸತ್ಕಸಂಗತಿಗಳನ್ನು ಹೇಳುವುದಕ್ಕೆ ಬಿಡದೆ ಬಾಯಿಗೆ ಬೀಗ ಹಾಕಿದ್ದಾರಲ್ಲಾ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಅಧ್ಯಕ್ಷರೇ, 1989 ಅಕ್ಟೋಬರ್ ತಿಂಗಳಲ್ಲಿ ಏನು ಸಾಲ ಇತ್ತು ಅಂತಪವರಿಗೆ ಮಾತ್ರ ಸಾಲ ಮನ್ನಾ ಮಾಡಬೇಕೆಂಬ ಒಂದು ಆದೇಶ ಇದೆ. ಆದರಿಂದೆ, ಏನಾಗಿದೆ ಅಂದರೆ, ಹೋದಸಾರಿ 1983 ರಲ್ಲಿ ಯಾರಿಗೆ ಸಾಲ ಇತ್ತು ಅವನಿಗೆ ಲಾಭ ಆಗಿದೆ. ಅವನು ಸಾಲ ಕೊಡಲಿಲ್ಲ. 1983 ರಲ್ಲಿ ಅವನಿಗೆ ಸಾಲ ಮನ್ನಾ ಆಯಿತು. ಆನಂತರ 1986 ರಲ್ಲಿಯೂ ಕೂಡ ಆವನಿಗೆ ಲಾಭ ಆಯಿತು. ಬೇರೆ ಯವರಿಗೆ ಲಾಭ ಆಗಲಿಲ್ಲ. ಇದರಿಂದ ಯಾರು ಸಾಲ ಪಾಪಸ್ಸು ಕೊಡುತ್ತಿದ್ದಾರೆ ಅವರಿಗೆ ಏಷ್ಟು ಕೊಡಬೆ ಯಾಗುತ್ತಿದೆ ಎನ್ನುವುದನ್ನು ತಾವು ನೋಡಬೇಕು. ಈಗ ಸಾಲ ಕೊಟ್ಟವರಲಿ ಆಥವಾ ಜಿಡಲಿ, 1989ರ ಆಕ್ಟೋಬರ್ ಏನಿದೆ ಅದು ಸಾಲ ವಾಪಸ್ಸು ಕೊಟ್ಟವರಿಗೂ ಅನ್ವಯಿಸಬೇಕು.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರಿಗೆ ನಾನು ಮಾತನಾಡಲಿಕ್ಕೆ ಆವಕಾಶ ಕೊಡುತ್ತೇನೆ. ದಯಮಾಡಿ ಕುಳಿತು ಕೊಳ್ಳಬೇಕು. ಈಗ ರಾಜೂಗೌಡರು ನನ್ನ ಗಮನಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ನಿಂತಿದ್ದಾರೆ. ಶಿವರಾಮೇಗೌಡರು, ನಾರಾಯಣಸ್ವಾಮಿ ಅವರೆಲ್ಲರೂ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರೇ, ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಯಾರು ಸಾಲ ಪಾಪಸ್ಸು ಕೊಟ್ಟಿದ್ದಾರೆ ಅವರಿಗೆ ತೊಂದರೆ ಯಾಗಿದೆ. ಅಂತಹವರ ಪರಿಸ್ಥಿತಿ ನೋಡಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ ಅವರು ಬಡ್ಡಿ ಮನ್ನಾ ಮಾಡುವಂಥದ್ದು ಏನಾದರೂ ಇದ್ದರೆ ಅದನ್ನು ಹೇಳಬೇಕು. ಬಡ್ಡಿ ಮನ್ನಾ ಮಾಡು-ತ್ತಾರೋ ಆಥವಾ ಏಳು ಪರ್‌ಸೆಂಟ್‌ಗೆ ಕೊಡುತ್ತಾರೆಂದೋ ಅದನ್ನು ಹೇಳಬೇಕು. ಹಾಗೆಯೇ ಸಾಲ ವಾಪಸ್ಸು ಕೊಟ್ಟವರ ಬಗ್ಗೆಯೂ ಹೇಳಬೇಕು. ಪದೇ ಪದೇ ಅವರಿಗೆ ಅನುಕೂಲ ಆಗತಕ್ಕ ವ್ಯವಸ್ಥೆ ಬೇಡ.

ಅಧ್ಯಕ್ಷರು :– ಈಗ ಇದು ಅಜೆಂಡ ಪಟ್ಟಿಯಲ್ಲಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಸಾಲ ವಸೂಲಾತಿಗೆ ತಡೆಯಾಜ್ಞೆ ಕೊಡುವಪದೆಗೆ ನಾನು ಸದನದಲ್ಲಿ ಯಾವುದೇ ಕಾರ್ಯಕಲಾಪದಲ್ಲಿ ಭಾಗವಹಿಸುವುದಿಲ್ಲ. ಇದ್ದರಿಂದ ಸಾಲ ವಸೂಲಾತಿ ಬಗ್ಗೆ ತಡೆಯಾಜ್ಞೆ ಕೊಡು ತ್ತೇವೆಂದು ಹೇಳಬೇಕು. ಕೇಂದ್ರ ಸರ್ಕಾರ ಒಪ್ಪದಿದ್ದರೆ ರಾಜ್ಯ ಸರ್ಕಾರ ಮುಚ್ಚು ಕೊಡುತ್ತೇವೆ ಎನ್ನುವಂಥ ಧೋರವಸೆಯನ್ನಾದರೂ ಈ ಸದನಕ್ಕೆ ಕೊಡಬೇಕು. ಇಲ್ಲದೇ ಇದ್ದರೆ ನಾವು ಇಲ್ಲಿ ಯಾವುದೇ ಕಾರ್ಯಕಲಾಪದಲ್ಲಿ ಭಾಗವಹಿಸುವುದಿಲ್ಲ. ಇವೊತ್ತು ಬರಗಾಲಕ್ಕೆ ತುತ್ತಾಗಿರುವ ರೈತನ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ನಮಗೆ ಸ್ಪಷ್ಟವಾದ ಉತ್ತರ ಬೇಕಾಗಿದೆ. ಇಲ್ಲದೇ ಇದ್ದರೆ, ಈ ಸದನದ ಯಾವುದೇ ಕಾರ್ಯಕಲಾಪದಲ್ಲಿ ಭಾಗವಹಿ ಸದೇ, ಬಹಿಷ್ಕಾರ ಹಾಕಬೇಕಾಗುತ್ತದೆ. ರೈತರ ಹಿತದೃಷ್ಟಿಯಿಂದ ನಾವು ನಾಲ್ಕು ಜನರು ಇಲ್ಲಿ ಧರಣಿ ಕುಳಿತು ಕೊಳ್ಳುತ್ತೇವೆ.

(ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನದಿಂದ ಧರಣಿ ಕೂಡಲು ಮುಂದೆ ಬಂದರು.)

ಅಧ್ಯಕ್ಷರು :– ಮಾನ್ಯ ಸದಸ್ಯರಾದ ಟಿ. ಬಿ. ಜಯಚಂದ್ರ ಅವರು ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳ ಗಮನ ಸೆಳೆಯುವುದು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ :– ಅಧ್ಯಕ್ಷರೇ, ಶಾಸಕರು ಹೋದಡೆ ಹೋದರೆ ಹುಚ್ಚುನಾಯಿಗೆ ಹೊಡೆದ ಹಾಗೆ ಹೊಡೆಯುತ್ತಾರೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಈಶ್ವರಪ್ಪನವರೆ, ಮಾನ್ಯ ರುಕ್ಮಯ್ಯ ಪೂಜಾರಿಯವರೆ, ನಿಮ್ಮ ನಾಯಕರಾದಂಥ ಶ್ರೀಮಾನ ಯಡಿಯೂರಪ್ಪನವರು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕು. ಹಾಗೆ ಎಂದು ಹೇಳಿ ಬೆಳಿಗ್ಗೆ ಬಂದು ನನ್ನನ್ನು ಕಂಡರು. ಆದರ ಬಗ್ಗೆ ನಿಲುವಳಿ ಸೂಚನೆ ನನಗೆ ಕಳುಹಿಸಿಕೊಟ್ಟಿದ್ದರು. ಈ ವಿಚಾರದ ಮಹತ್ವ ವನ್ನು ಅರಿತು ನಾನು ಗಮನದಲ್ಲಿಟ್ಟುಕೊಂಡು ಅವರಿಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟೆ. ಮಾನ್ಯ ಮುಖ್ಯಮಂತ್ರಿಗಳು ಆದರ ವಿಚಾರದಲ್ಲಿ ತಮ್ಮ ನಿಲುವನ್ನು ಹೇಳುವುದಕ್ಕೆ ತಯಾರಾದ್ದರಿಂದ, ಎಲ್ಲಾ ಪಕ್ಷದ

ಮುಖಂಡರುಗಳಿಗೂ ಕೂಡ ಈ ವಿಚಾರದಲ್ಲಿ ತಮ್ಮ ಭಾವನೆಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದೆ. ಪ್ರಜಾ ಪ್ರಭುತ್ವ ಎಂದು ಹೇಳಿದರೆ, ವಿಚಾರಗಳನ್ನು ಹೇಳತಕ್ಕಂಥಾದ್ದು, ಅವರು ಉತ್ತರ ಕೊಡತಕ್ಕಂಥಾದ್ದು. ಅನಂತರ ತೀರ್ಮಾನ ಆಗತಕ್ಕಂಥಾದ್ದು ಇದೆ. ಆದರೆ, ಈ ವಿಚಾರದ ಬಗ್ಗೆ ತೀರ್ಮಾನ ನಾನು ಹೇಳಿದ ರೀತಿನಲ್ಲೇ ಕೊಡುವವರೆಗೂ ಕೂಡ ನಾನು ಸದನದ ಕಾರ್ಯಕಲಾಪದಲ್ಲಿ ಪಾಲ್ಗೊಳ್ಳುವುದಿಲ್ಲ. ಸದನವನ್ನು ಬಹಿಷ್ಕಾರ ಮಾಡುತ್ತೇನೆ ಹಾಗೆ ಎಂದು ಹೇಳುವುದು ಈ ಜನತಾಂತ್ರಿಕ ಪ್ರಜಾಪ್ರಭುತ್ವ ಸಂಸದೀಯ ಚೌಕಟ್ಟಿಗೆ ಅದು ಹೊಂದಿಕೊಳ್ಳುತ್ತದೆಯೋ, ಏನೋ ಎನ್ನುವುದರ ಬಗ್ಗೆ ನನಗೆ ಅನುಮಾನ ಇದೆ. ಆ ಅನುಮಾನವನ್ನು ಮಾನ್ಯಸದಸ್ಯರಾದ ಈಶ್ವರಪ್ಪನವರಿಗೆ ಮತ್ತು ಪೂಜಾರಿಯವರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ :– ರಾಜ್ಯದ ರೈತರ ಬಗ್ಗೆ ಹೇಳುವುದು ಬೇಡವೇ ?

ಅಧ್ಯಕ್ಷರು :– ನಾನು ನಿಮಗೆ ಅವಕಾಶವನ್ನು ಡಿನೈ ಮಾಡಿದನೇ. ನಾನು ಅವಕಾಶವನ್ನು ನಿಮಗೆ ಕೊಟ್ಟನೋ ಇಲ್ಲವೋ ?

ಶ್ರೀ ಕೆ. ಎಸ್. ಈಶ್ವರಪ್ಪ :– ತಾವು ಅವಕಾಶ ಕೊಟ್ಟಿದ್ದೀರಿ. ರಾಜ್ಯದ ರೈತರಿಗೆ ಆಗತಕ್ಕ ತೊಂದರೆಗಳನ್ನು ತಿಳಿಸಿ ಕ್ಲಾರಿಫಿಕೇಷನ್ ಕೇಳುತ್ತಿದ್ದೇವೆ.

ಅಧ್ಯಕ್ಷರು :– ಅದಕ್ಕೆ ನಿಮ್ಮ ನಾಯಕರನ್ನು ಅವರ ಸ್ಥಾನಕ್ಕೆ ಕರೆದು ಕೂರಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ತಮ್ಮ ಬಗ್ಗೆ ನಮಗೆ ಅತ್ಯಂತ ಗೌರವವಿದೆ. ತಮ್ಮ ಆದೇಶಕ್ಕೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಲೆಬಾಗದಿದ್ದರೆ ತಾವು ಇಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು :– ನಾನು ಅತ್ಯಂತ ನಮ್ರತೆಯಿಂದ ತಮಗೆ ಏನು ಸೂಚನೆ ನೀಡುತ್ತಿದೇನೆಂದರೆ, ನಾನು ನಿಮಗೆ ಅವಕಾಶವನ್ನು ನೀಡದೇ ಇದ್ದಿದ್ದರೆ ತಮಗೆ ಅವಕಾಶವನ್ನು ಕೊಡುವುದಕ್ಕೆ ನಿರಾಕರಿಸಿದ್ದರೆ, ಆಗ ನೀವು ನಿಮಗೆ ತೋಚಿದಂಥ ರೀತಿಯಲ್ಲಿ ತಮ್ಮ ಪ್ರತಿಶೋಧವನ್ನು ವ್ಯಕ್ತಪಡಿಸಬಹುದಿತ್ತು. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ತಯಾರಾಗಿದ್ದಾರೆ. ನೀವು ನಿಮ್ಮ ಅಭಿಪ್ರಾಯ ಅನಿಸಿಕೆಗಳನ್ನು ಪ್ರತಿಪಾದನೆ ಮಾಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಆ ಕಡೆ ಇರತಕ್ಕವರು, ಮತ್ತು ಈ ಕಡೆ ಇರತಕ್ಕವರು ಎಲ್ಲರೂ ಉದ್ದೇಶವನ್ನು ಇಟ್ಟುಕೊಂಡಿರುವುದು ಎಂದರೆ. ರೈತರ ಸಾಲ ಮನ್ನಾ ಆಗಬೇಕು ಎಂಬುದು. ಎಲ್ಲರೂ ಕೂಡ ರೈತರ ಬಗ್ಗೆ ಕಳಕಳಿ ಇರತಕ್ಕವರು. ಇಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ಸದನದಲ್ಲಿ ಅನೇಕ ಸಾರಿ ಇದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈಗಿನ ಪರಿಸ್ಥಿತಿಯಾದರೂ ಏನಿದೆ ? ನಮ್ಮ ರಾಜ್ಯದಲ್ಲಿ ದುರ್ದೈವದಿಂದ ಮತ್ತೆ ಬರಗಾಲದ ವಾತಾವರಣ ಇದೆ.

ಅಧ್ಯಕ್ಷರು :– ಇಲ್ಲಿ ಈ ವಿಚಾರ ಚರ್ಚೆಯಾಗಲಿಲ್ಲವೆ ? ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ 3 ದಿನಗಳ ಕಾಲ ಚರ್ಚೆಗೆ ಅವಕಾಶವನ್ನು ಕೊಡಲಿಲ್ಲವೆ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಮುಖ್ಯಮಂತ್ರಿಗಳಿಗೂ ಇದರ ಬಗ್ಗೆ ಕಳಕಳಿ ಇದೆ. ರೈತರ ಪರವಾಗಿ ಚಿಂತನೆಯನ್ನು ಮಾಡತಕ್ಕ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಅವರಲ್ಲಿ ನನ್ನ ಪ್ರಾರ್ಥನೆ ಏನೆಂದರೆ. ಈ ವಿಚಾರವನ್ನು ವಿಸ್ತಾರವಾಗಿ ಚರ್ಚೆ ಮಾಡೋಣ. ಇದಕ್ಕೆ ತಾವು ಅನುಮತಿಯನ್ನು ಕೊಡಿ. ಈ ಕಡೆಯಲ್ಲಿ ಕುಳಿತಿರತಕ್ಕ ಯಾರೋ ನಾಲ್ಕು ಜನರು ಹೇಳಿದಂಥ ರೀತಿಯಲ್ಲಿ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೈತರ ಪರವಾಗಿ ನನ್ನ ವಿನಂತಿ ಏನೆಂದರೆ. ಈ ರೀತಿಯ ಬರಗಾಲ ನಮ್ಮ ರಾಜ್ಯದಲ್ಲಿರುವಾಗ ರೈತನ ಸಾಲ ವಸೂಲಾತಿಗೆ ನೂರಕ್ಕೆ ತೊಂಭತ್ತು ಪರ್ಸೆಂಟ್‌ನಷ್ಟು ಬ್ಯಾಂಕ್‌ಗಳವರು ರೈತರಿಗೆ ಈಗಾಗಲೇ ನೋಟೀಸುಗಳನ್ನು ಕೊಟ್ಟು ನಿಮ್ಮ ಜಮೀನನ್ನು ಹರಾಜು ಹಾಕುತ್ತೇವೆಂದು ತಾವೇ ಖುದ್ದಾಗಿ ಕೂಡ ಫಿಕ್ಸ್ ಮಾಡಿದ್ದಾರೆ. ಕೇಂದ್ರ ಸರ್ಕಾರದ ಕಂಡೀಷನ್‌ಗಳಿಂದಾಗಿ ರೈತರ ಸಾಲ ಮನ್ನಾ ಯೋಜನೆಯಿಂದ ರೈತರಿಗೆ ಅನುಕೂಲವಾಗುವುದಿಲ್ಲ ಎಂಬ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ್ದಾರೆ. ಆದುದರಿಂದಲೇ ನಾನು ಪ್ರಾರಂಭದಲ್ಲೇ ಹೇಳಿದ್ದುದು, ತಾವು ಯಾವು

ದಾದರೊಂದು ರೀತಿಯಲ್ಲಿ ಸೂಚನೆಯನ್ನು ಕೊಟ್ಟು ಸಾಲ ವಸೂಲಾತಿಗೆ ತಡೆಯಾಜ್ಞೆಯನ್ನು ಕೊಡಿ. ಸಹಕಾರಿ ಬ್ಯಾಂಕ್‌ನವರ ಪರವಾಗಿ ಸಾಲದ ಹಣವನ್ನು ಯಾರು ಕಬ್ಬನ್ನು ಫ್ಯಾಕ್ಟರಿಗಳಿಗೆ ಕೊಟ್ಟಿದ್ದಾರೆ ಅವರಿಂದ ಡಿಡಕ್ಟ್ ಮಾಡುತ್ತಿದ್ದಾರೆ. ಇದು ಒಂದು ಕಡೆ. ಮತ್ತೊಂದು ಕಡೆ ಕೇಂದ್ರ ಸರ್ಕಾರದವರು ಒಪ್ಪುತ್ತಿಲ್ಲ. ಇದರಿಂದಾಗಿ ಇವತ್ತು ರಾಜ್ಯ ಸರ್ಕಾರದ ಜವಾಬ್ದಾರಿ ಬಹಳವಾಗಿದೆ. ನಿಮ್ಮ ಬೆಂಬಲಕ್ಕೆ ನಾವೆಲ್ಲರೂ ಬರುವುದಕ್ಕೆ ಸಿದ್ಧವಾಗಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಪ್ರಧಾನಿಯವರ ಮನಸ್ಸನ್ನು ಒಲಿಸಿ, ನಮ್ಮ ರಾಜ್ಯದ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆದು ಸಣ್ಣ ರೈತರ ಸಾಲವನ್ನಾಗಲಿ, ದೊಡ್ಡ ರೈತರ ಸಾಲವನ್ನಾಗಲಿ ಮನ್ನಾ ಮಾಡತಕ್ಕ ಪ್ರಯತ್ನವನ್ನು ಮಾಡೋಣ. ಈ ಪ್ರಯತ್ನ ಸಫಲವಾಗದೇ ಹೋದಾಗ ರೈತ ತೊಂದರೆಗೆ ಒಳಪಡುವುದು ಬೇಡ. ಅಂಥ ವಿಶೇಷ ಸಂದರ್ಭ ಬಂದಾಗ ಈ ಭಾರವನ್ನು ನಾನು ಹೊರುತ್ತೇನೆ. ನಮ್ಮ ರಾಜ್ಯ ಸರ್ಕಾರ ರೈತರ ಹಿತ ದೃಷ್ಟಿಯಿಂದ ಮುಂದೆ ಬರುತ್ತದೆ. ರೈತನನ್ನು ಸಾಲದಿಂದ ಋಣಮುಕ್ತನನ್ನಾಗಿ ಮಾಡುತ್ತದೆ ಎಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುತ್ತಾರೆ. ಅವರಿಗೆ ನಾವು ಪೂರ್ಣ ಸಹಕಾರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಈ ರೀತಿಯಾದ ಒಂದು ಭರವಸೆಯನ್ನು ರೈತರ ಬಗ್ಗೆ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಕೇಂದ್ರ ಸರ್ಕಾರದ ಕಂಡೀಷನ್‌ಗಳು ಸರಿಯಿಲ್ಲ. ಎಂದು ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳ ಬಾಯಿಂದಿಂದ ಈ ಒಂದು ಉತ್ತರ ಬಂದರೆ ರೈತರನ್ನು ಸಾಲದಿಂದ ವಿಮೋಚನೆ ಮಾಡಿದಂತಾಗುತ್ತದೆ. ಈ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಮಾನ್ಯ ಅಧ್ಯಕ್ಷರೇ ಸಾಲ ತೆಗೆದುಕೊಳ್ಳುವ ವಿಚಾರದಲ್ಲಿ ಹೇಳುವುದಾದರೆ. ರಾಷ್ಟ್ರೀಕರಣವಾಗಿರತಕ್ಕ ಬ್ಯಾಂಕುಗಳಲ್ಲಿ ಸಾಲವನ್ನು ತೆಗೆದುಕೊಳ್ಳಿ ಎಂದು ನಾವೇ ಕೆಲವು ರೈತರಿಗೆ ಆದೇಶವನ್ನು ಕೊಟ್ಟಿದ್ದೇವೆ. ಮತ್ತೆ ಕೆಲವು ರೈತರಿಗೆ ರಾಷ್ಟ್ರೀಕರಣವಾಗದೇ ಇರತಕ್ಕ ಬ್ಯಾಂಕುಗಳಲ್ಲೂ ಕೂಡ ಸಾಲವನ್ನು ತೆಗೆದುಕೊಳ್ಳಬಹುದೆಂದು ಸರ್ಕಾರದವರೇ ಆದೇಶವನ್ನು ಕೊಟ್ಟಿದ್ದಾರೆ. ಇವತ್ತು ದೊಡ್ಡ ಸಮಸ್ಯೆಯಾಗಿರತಕ್ಕದ್ದು ಎಂದರೆ, ರಾಷ್ಟ್ರೀಕರಣವಾಗದೇ ಇರತಕ್ಕ ಬ್ಯಾಂಕುಗಳು ಏನಿವೆ ಅವು ತಾವು ಕೊಟ್ಟಿರುವ ಇಂಥ ಸಾಲದ ಮೊತ್ತಕ್ಕೆ ನೋಟೀಸುಗಳನ್ನು ಕಳುಹಿಸುತ್ತಿವೆ. ಆದ್ದರಿಂದ ನಾನು ಹೇಳುವುದೇನೆಂದರೆ, It is its legal duty to instruct non-nationalised banks not to issue notices. ಈ ಕೆಲಸ ಆಗಬೇಕು, ಮತ್ತು ಬೇಷರತ್ತಾಗಿ ಈ ಸಾಲ ರದ್ದಾಗಬೇಕೆಂಬುದು ನಮ್ಮ ಸರ್ಕಾರದ ನಿಲುವು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಗೊಂದಲ ನಿವಾರಣೆಯಾಗುವವರೆಗೂ ಸಾಲದ ವಸೂಲಾತಿ ಮತ್ತು ಜಪ್ತಿಯ ಕೆಲಸ ನಿಲ್ಲಬೇಕು.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೇ, ಸರ್ಕಾರದ ನಿಲುವು ಏನು ಎನ್ನುವುದನ್ನು ಈ ಹಿಂದೆ ಸ್ಪಷ್ಟವಾಗಿ ಹೇಳಿತ್ತು ಈಗಲೂ ಕೂಡ ಅದೇ ನಿಲುವು ಆಗಿರುತ್ತದೆ. ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲೂ ಕೂಡ ಅನೇಕ ಭಾಗಗಳಲ್ಲಿ ಪದೇ ಪದೇ ಬರಗಾಲ ಬಿದ್ದಿರತಕ್ಕಂಥ ಒಂದು ಕಾರಣವನ್ನು ನಾವು ಇಟ್ಟುಕೊಂಡಿದ್ದೇವೆ. ಇಂಥ ಒಂದು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ವಿಚಾರ ಮಾಡಿ ಹಲವಾರು ವರ್ಷಗಳಿಂದ ಬಾಕಿ ಸಾಲ ಉಳಿದಿರುವುದನ್ನು ಒಂದು ಸಾಲದ ಮಿತಿ ಮಾಡಿಕೊಂಡು ಅದನ್ನು ವಜಾಮಾಡತಕ್ಕಂಥದ್ದು ಒಳ್ಳೆಯದು ಎನ್ನುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಮಾನ್ಯ ವಿ. ಪಿ. ಸಿಂಗ್‌ರವರು ಪ್ರಧಾನಿಯಾಗಿ ಕೇಂದ್ರ ಸರ್ಕಾರದಲ್ಲಿದ್ದಾಗ ಹೇಳಿದ ವಿಚಾರ ಎಲ್ಲಾ ರಾಜ್ಯಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಅವರು ಮಾಡಿದ್ದರು. ಕೆಲವು ರಾಜ್ಯಗಳು 50 ಪರ್ಸೆಂಟ್ ಉಳಿಸಿಕೊಳ್ಳುವುದಕ್ಕೆ ಒಪ್ಪಿದ್ದರೆ ಇನ್ನು ಕೆಲವು ರಾಜ್ಯಗಳು ಒಪ್ಪಲಿಲ್ಲ. ಒಪ್ಪದಿರತಕ್ಕಂಥ ರಾಜ್ಯಗಳಲ್ಲಿ ಕೇರಳ ಮತ್ತು ನಾವು ಇದ್ದೇವೆ. ಕೊನೆಗೆ ಅವರೊಡನೆ ಮಾತುಕತೆ ಪತ್ರವ್ಯವಹಾರವಾದ ಮೇಲೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲ್‌ರವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಹತ್ತು ಸಾವಿರ ಮಿತಿಗೆ ಒಳಪಡತಕ್ಕಂಥವರ ಬಗ್ಗೆ ಅದನ್ನು ಕೇಂದ್ರ ಸರ್ಕಾರದವರು ಒಪ್ಪುತ್ತಾರೆ. ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. 50 ಪರ್ಸೆಂಟ್ ಕೊಡುವುದಕ್ಕೆ ಒಪ್ಪಿಕೊಳ್ಳುತ್ತೇವೆನ್ನುವ ಮಾತನ್ನು ಹೇಳಿದರು. ಇದರಲ್ಲಿ ಏನು ಲಾಜಿಕ್ ಇದೆಯೋ ಅಂಥದ್ದು ಒಪ್ಪಿಕೊಂಡಿರುತ್ತಾರೆ. ಅದರಂತೆ ಅವರು ನಮ್ಮ ರಾಜ್ಯಕ್ಕೆ ಹಣವನ್ನು ಬಿಡುಗಡೆ ಮಾಡಿದರೆ ಒಳ್ಳೆಯದೆಂದು ಹೇಳಿ ಇದು ಅವರ ಅಭಿಪ್ರಾಯಕ್ಕೆ ಒಳಪಟ್ಟಿದ್ದು ಎಂದು ಹೇಳುತ್ತೇನೆ. ಈಗ ನಮಗೆ ಕಂತುಗಳನ್ನು ಜಾಸ್ತಿ ಕೊಡಬೇಕೆನ್ನುವ ಪಾಯಿಂಟ್ ಹೇಳುವುದು ತಮಗೆಲ್ಲಾ ಗೊತ್ತಿದೆ. ಅದಕ್ಕೆ ಅನುಸಾರವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಇವತ್ತು ಕೇಂದ್ರ ಸರ್ಕಾರ ಅದರ ಮೇಲೆ ಏನು ಮಾಡಿದೆ ಎನ್ನುವುದು ಹಲವಾರು ರಾಜಕೀಯ ಬದಲಾವಣೆಗಳಿಂದ, ಸರ್ಕಾರಗಳಿಂದ ಆಗಿಲ್ಲ. ಅದರ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗಲು ಸಂಬಂಧವಿಲ್ಲ. ಆದರೆ ಒಂದು ವಿಚಾರವನ್ನು ಹೇಳುವುದಾದರೆ We have not heard anything from the Central Government on the points raised by

each of the State Government including our own Government. In the meanwhile ಇಲ್ಲಿ ಕೆಲವು ಷರತ್ತುಗಳು ಇರಬಹುದು, ಅಥವಾ ಇಲ್ಲದಿರಬಹುದು, ಸಾಮಾನ್ಯವಾಗಿ ಅದರಿಂದ ರೈತರಿಗೆ ಉಪಯೋಗ ಸಿಕ್ಕಿದ್ದರೆ ಅದರ ಬಗ್ಗೆ ನಾವು ಯಾವ ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡಿಲ್ಲ. ಅದರ ಬಗ್ಗೆ ನಾವು ಹೇಳಿದ್ದೇವೆ. ಇದರ ವಿವರಗಳನ್ನು ಹೊಸದಾಗಿ ಪ್ರಭಾಸಿಗಳಾಗಿ ಬಂದಿರುವ ಮಾನ್ಯ ಚಂದ್ರಶೇಖರ್‌ರವರು ಕೇಳಿದ್ದಾರೆ. ನಾವು ಕೂಡ ಕಳುಹಿಸಿಕೊಡುತ್ತೇವೆ. ಇದರಲ್ಲಿ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತ ಮಧ್ಯಪ್ರದೇಶದ ಸರ್ಕಾರದವರು 750 ಕೋಟಿ ರೂಪಾಯಿಗಳನ್ನು ಮಹಿಸಿಕೊಂಡಿರುತ್ತಾರೆ ಹಾಗೆಯೇ ನಮ್ಮ ರಾಜ್ಯ ಸರ್ಕಾರದವರು ಮಹಿಸಿಕೊಳ್ಳಬೇಕು ಎಂದು ಹೇಳಿದರು. ನಮ್ಮ ಬೊಕ್ಕಸದ್ದು ಎಷ್ಟು ಏನ್ನುವುದನ್ನು ಕರಾರುವಾಕ್ಕಾಗಿ ಹೇಳಬೇಕೆಂದು ಹೇಳಿದ್ದಾರೆ. ಇವತ್ತು ಅರ್ಧ ಭಾಗ ಮಹಿಸಿಕೊಂಡಾಗ ನಮ್ಮ ಬೊಕ್ಕಸದ್ದು ಇದ್ದೇ ಇದೆ ಎಂದು ಹೇಳಬೇಕಾಗುತ್ತದೆ. ಮಧ್ಯಪ್ರದೇಶ ಸರ್ಕಾರ ಎಷ್ಟು ಪರ್ಸೆಂಟ್ ಮಹಿಸಿಕೊಂಡಿದೆ ಎನ್ನುವ ಮಾತು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ವ್ಯತ್ಯಾಸ ಬರುತ್ತದೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮತ್ತು ಅನೇಕ ರಾಜ್ಯಗಳು ಒಪ್ಪಿರುವ ಹಿನ್ನೆಲೆಯಲ್ಲಿ 50 ಪರ್ಸೆಂಟ್ ನಾವೂ ಕೂಡ ಒಪ್ಪಿಕೊಂಡಿರುತ್ತೇವೆ. There is a pressure on the State exchequer to the extent of 50 percent; I hope all of you will agree with me 50 ಪರ್ಸೆಂಟ್ ನಷ್ಟು ಹೊರೆ ನಮ್ಮ ರಾಜ್ಯಕ್ಕೂ ಬಿದ್ದೇಬೇಳುತ್ತದೆ. ಆಷ್ಟಾದರೂ ಬರಲಿ ಎಂದು ಹೇಳಿ 50 ಪರ್ಸೆಂಟ್‌ಗೆ ಒಪ್ಪಿಕೊಂಡಿದ್ದೇವೆ.

1.05 ಪಿ. ಎಮ್.

ಆದುದರಿಂದ, ವಿರೋಧ ಪಕ್ಷದ ನಾಯಕರು ಯಡಿಯೂರಪ್ಪನವರು, ಪ್ರೊಫೆಸರ್‌ರವರು, ಈಶ್ವರಪ್ಪನವರು ಯಾರೇ ಇರಬಹುದು, ತಾವೆಲ್ಲರೂ ಇದನ್ನು ಒಪ್ಪುತ್ತೀರೆಂದು ಭಾವಿಸಿದ್ದೇನೆ. ಷರತ್ತುಗಳ ಬಗ್ಗೆ ಅಂತಿಮ ತೀರ್ಮಾನವಾದ ಮೇಲೆ ಕೂಡ ನಾವು 50 ಪರ್ಸೆಂಟ್‌ಗೆ ಒಪ್ಪಿದ್ದೇವೆ. ಅದು 50-60 ಕೋಟಿ ರೂಪಾಯಿ ಆಗುತ್ತದೆಯೋ ಅಥವಾ 120 ಕೋಟಿ ರೂಪಾಯಿಗೆ ಹೋಗುತ್ತದೆಯೋ ಗೊತ್ತಿಲ್ಲ. We are prepare to take up that ಈ ವಿಚಾರದ ಬಗ್ಗೆ ಏನು ವಿವರ ಕೇಳಿದ್ದಾರೆ ಆದರ ಬಗ್ಗೆ ಬರೆಯುತ್ತೇವೆ. 50 ಪರ್ಸೆಂಟ್‌ಗೆ ಒಪ್ಪಿಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ. come what may ಆದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ತಾವು ಇಲ್ಲಿ ಯಾವುದೇ ಷರತ್ತು ಆಗದಿದ್ದರೆ 10 ಸಾವಿರ ರೂಪಾಯಿಗಳ ಸಾಲ ಮನ್ನಾಕ್ಕೆ ಒಪ್ಪಿಕೊಳ್ಳಬೇಕೆಂದು ಹೇಳುತ್ತೀರೆಂದು ನನಗೆ ಗೊತ್ತು. ಅದು ರೈತರ ಪರವಾದ ಅಭಿಪ್ರಾಯ. ಈ ಬಗ್ಗೆ ಕೇಂದ್ರ ಸರ್ಕಾರದವರು ಏನು ಹೇಳುತ್ತಾರೆಂಬುದರ ಮೇಲೆ ಡಿಪೆಂಡ್ ಆಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ ಸಂಪೂರ್ಣವಾಗಿ ಒಪ್ಪಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಆದರೂ ಅನೇಕ ರಾಜ್ಯಗಳು ಒಪ್ಪಿರುವ ಹಾಗೆ 50 ಪರ್ಸೆಂಟ್‌ಗೆ ಒಪ್ಪಿಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ ಮತ್ತು ಅದಕ್ಕೆ ನಾವು ಬದ್ಧರಾಗಿರುತ್ತೇವೆ. ನಮ್ಮ ಪಾಲಿಗೆ ಎಷ್ಟಾದರೂ ಬರಲಿ ಅದನ್ನು ನಾವು ಹೊರುತ್ತೇವೆ. ಆದರೆ 50 ಪರ್ಸೆಂಟ್‌ಗಿಂತ ಜಾಸ್ತಿ ಹೊರುವ ಪರಿಸ್ಥಿತಿಯಲ್ಲಿ ಇಲ್ಲ.ಮತ್ತೆ ಇದನ್ನು ಜರ್ಕ್‌ಗೆ ಗ್ರಾಸವಾಗಿ ಇಡುವುದು ಬೇಡ. Let us be very very clear on that point ಇಲ್ಲಿ ಬ್ಯಾಂಕುಗಳ ವಿಚಾರವನ್ನು ಪ್ರೊಫೆಸರ್ ಮತ್ತು ತಾವು ಎತ್ತಿದ್ದೀರಿ. ಇದರ ವಿಚಾರದಲ್ಲಿ ನಾನು ಷುಗರ್ ಫ್ಯಾಕ್ಟರಿ ಮತ್ತೊಂದು ವಿವರಗಳನ್ನು ತೆಗೆದುಕೊಳ್ಳುತ್ತೇನೆ. ತಾವು ಕೂಡ ಎಲ್ಲಿ ಏನು ಎಂದು ಪತ್ರ ಬರೆಯಿರಿ, ಮೌಖಿಕವಾಗಿಯಾದರೂ ಹೇಳಿ, ಪತ್ರ ಬರೆದರೆ ಇನ್ನೂ ಒಳ್ಳೆಯದು. ಬ್ಯಾಂಕುಗಳ ವಿಚಾರದಲ್ಲಿ ಏನಾಗಿದೆ ಎಂದರೆ ಇದು ನ್ಯಾಷನಲೈಸ್ಡ್ ಬ್ಯಾಂಕ್‌ಗಳಿಗೆ ಅಪ್ಲಿಕೆಬಲ್ ಆಗುವುದಿಲ್ಲ. ಕರ್ನಾಟಕ ಬ್ಯಾಂಕು ಇದರಲ್ಲಿ ಬರುವುದಿಲ್ಲ. ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿದೆ. ನಿಮ್ಮ ಹಾಗೆ ತೀರ್ಮಾನ ಮಾಡಲಿಕ್ಕೆ ಜಾಗದಲ್ಲಿ ಯಾವುದೇ ರಾಜ್ಯ ಸರ್ಕಾರ ಇಲ್ಲ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿದೆ. Why should you restrict only to the nationalised banks ? Please extend this to cover the private banks like Karnataka Bank ಎಂಬ ಮಾತನ್ನು ಹೇಳೋಣ. ಅಂತಿಮ ತೀರ್ಮಾನ ಅವರ ಕೈಯಲ್ಲಿದೆಯೇ ಹೊರತು ನಮ್ಮ ಕೈಯಲ್ಲಿ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕರಿಯಣ್ಣ :– ರಾಷ್ಟ್ರೀಕೃತವಲ್ಲದ ಬ್ಯಾಂಕುಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಬರುವವರೆಗೆ, ರಾಜ್ಯಸರ್ಕಾರದಿಂದ 50 ಪರ್ಸೆಂಟ್ ಏನು ಕೊಡುತ್ತೇವೆಂದು ಹೇಳುತ್ತಿದ್ದೀರಿ ಅಷ್ಟಾದರೂ ಕೊಡಬಹುದಲ್ಲವೆ?

ಶ್ರೀ ಎಸ್. ಬಂಗಾರಪ್ಪ :– ಹಾಗೆಲ್ಲ ಅಡ್ಜಸ್ಟ್ ಮಾಡುವುದಕ್ಕೆ ಹೋದರೆ ಏನೇನೋ ಆಗುತ್ತದೆ. ವಿರೋಧ ಪಕ್ಷದ ನಾಯಕರು ಒಂದು ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ವಾಸ್ತವವಾಗಿ ಎಷ್ಟಾಗುತ್ತದೆ ಎಷ್ಟು ಜನ ಕವರ್ ಆಗುತ್ತಾರೆಂದು ಕೇಳುವುದರಲ್ಲಿ ಅರ್ಥವಿದೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಷರತ್ತುಗಳು ಏನಿವೆ ಆ ಷರತ್ತುಗಳು ಕ್ಲಿಯರ್ ಆಗದೆ ನಾವು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅವತ್ತಿನಿಂದ ನಾವು ವಿನಂತಿಸುವುದು, ಕೇಂದ್ರ ಸರ್ಕಾರ ತಂದಿರುವಂತಹ ರೈತರ ಸಾಲ ಮನ್ನಾ ಯೋಜನೆ ಮೇಲೆ ಹಿಂದೆ ಇದ್ದಂತಹ ಸರ್ಕಾರ ಕೊಟ್ಟಿರುವಂತಹ ಇಂಟರೆಸ್ಟ್ ಸಬ್ಸಿಡಿ ಸ್ಕೀಂನಿಂದ ನಮಗೆ ಇಷ್ಟು ಅನ್ಯಾಯವಾಗಿದೆ ಎಂದು ನಮ್ಮ ರಾಜ್ಯದ ಸ್ಥಿತಿಗತಿಗಳನ್ನು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿ ನಮಗೆ ಒಂದು ಒಳ್ಳೆಯ ಯೋಜನೆಯನ್ನು ತಂದುಕೊಡಿ ಎಂದು ಇತ್ತು. ಮಧ್ಯ ಪ್ರದೇಶ ಸರ್ಕಾರ ಇಡೀ ದೇಶಕ್ಕೆ ಮಾದರಿಯಾಗಿ ರೈತರ ಸಾಲ ಮನ್ನಾ ಮಾಡುವ ಯೋಜನೆಯನ್ನು ಜಾರಿಗೆ ತಂದು ಸುಪ್ರೀಂಕೋರ್ಟ್‌ನವರ ಸಹಾಯ ಪಡೆದಿದೆ. ಅವರ ಮನಸ್ಸನ್ನು ಒಲಿಸಿ ಅವರಿಂದ 500 ಕೋಟಿ ರೂ. ಸಾಲ ಕೇಳಿದು ಕೊಂಡು ಇನ್ನು 500 ಕೋಟಿ ರೂಪಾಯಿಗಳ ಭಾರವನ್ನು ರಾಜ್ಯ ಸರ್ಕಾರ ಹೊತ್ತುಕೊಂಡು ಹತ್ತು ಸಾವಿರ ರೂಪಾಯಿಗಳವರೆಗೆ ರೈತರ ಸಾಲವನ್ನು ಮನ್ನಾ ಮಾಡಿದೆ. ಈಗ ನಾವು ನೀವು ಪ್ರಯತ್ನಮಾಡಿ ಕೇಂದ್ರ ಸರ್ಕಾರದ ಮನ ಒಲಿಸುವುದು ಒಳ್ಳೆಯದು. ಅದು ಆಗಲಿಲ್ಲ ಅಂದಾಗ ರಾಜ್ಯದ ಮುಖ್ಯ ಮಂತ್ರಿಗಳು ರೈತರ ಪರಿಸ್ಥಿತಿಯನ್ನು ಆರ್ಥ ಮಾಡಿಕೊಂಡು ಸಹಾಯ ಮಾಡಬೇಕು. ಬರೀ ಕಂಡೀಷನ್‌ನಿಂದ ಅನುಕೂಲವಾಗುವುದಿಲ್ಲ ಎಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ತಾವು ಧೈರ್ಯವಾಗಿ ಮುಂದೆ ಬಂದು ನಬಾರ್ಡ್‌ನಿಂದ ಸಾಲ ತೆಗೆದು ಕೊಳ್ಳುವ ವ್ಯವಸ್ಥೆ ಮಾಡಿಕೊಂಡು ರಾಜ್ಯದ ರೈತರ ನೆರವಿಗೆ ಬರುತ್ತೇನೆಂಬ ಭರವಸೆ ಕೊಡಬೇಕು. ಈ ಬಗ್ಗೆ ವಿವರವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅಲ್ಲಿಯವರೆಗೆ ತಾವು ಸಾಲ ವಸೂಲಾತಿಗೆ ತಡೆಯಾಜ್ಞೆ ಕೊಡಿ. ಇದಕ್ಕಿಂತ ಹೆಚ್ಚಿಗೆ ನಾನು ಒತ್ತಾಯಿಸುವುದಿಲ್ಲ.

ಅಧ್ಯಕ್ಷರು :– ಈಗಲೂ ಸಾಕಷ್ಟು ಚರ್ಚೆಯಾಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಚರ್ಚೆ ಮಾಡುವುದಾದರೆ ನಮಗೂ ಅವಕಾಶ ಕೊಡಬೇಕು. ಸಾಲ ಮನ್ನಾ ಮಾಡುವ ವಿಚಾರ ಅವರಿಗೊಬ್ಬರಿಗೆ ಸೀಮಿತವಾಗಿಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ಎಲ್ಲರಿಗೂ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಯಡಿಯೂರಪ್ಪನವರೇ, ಚರ್ಚೆಗೆ ಅವಕಾಶ ಕೊಡಬೇಕೆಂಬ ವಿಷಯ ಅಧ್ಯಕ್ಷರಂತೂ ಬೇಡ ಎಂದಿಲ್ಲ, ನಾವು ಸರ್ಕಾರದವರು ಹೇಳುವುದಿಲ್ಲ. That is not the point here ಎಷ್ಟೇ ನಾವು ಚರ್ಚೆ ಮಾಡಿದರೂ ಕೂಡ We will ultimately come to the same point. ಕೇಂದ್ರ ಸರ್ಕಾರದ ಅಂತಿಮ ಆದೇಶ ಇವುಗಳ ಬಗ್ಗೆ ಬರುವವರೆಗೆ ಎಷ್ಟು ಚರ್ಚೆ ಮಾಡಿದರೂ ಉಪಯೋಗವಾಗುವುದಿಲ್ಲ. ಉದಾಹರಣೆಗೆ ಮಧ್ಯಪ್ರದೇಶದ ಬಗ್ಗೆ ಹೇಳಿದ್ದೀರಿ. ಅವರು ಆ ರೀತಿಯಾಗಿ ಮಾಡಿರತಕ್ಕ ವಿಚಾರದಲ್ಲಿ ಕೂಡ ರಾಜ್ಯದ ಬೊಕ್ಕಸದಿಂದ ಮಾಡಬೇಕು ಎನ್ನತಕ್ಕ ವಿಚಾರ ಹೇಳಿದಾಗ ಇಂಡಿಪೆಂಡೆಂಟಾಗಿ ಮಾಡುವ ಪರಿಸ್ಥಿತಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಇನ್ನೆಲ್ಲಿಯವರೆಗೆ ಬರುವಹಾಗಿಲ್ಲ ಎಂಬುವುದನ್ನು ತಾವೂ ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. ಒಂದು ವಿಚಾರ ಎಂದರೆ ಒಂದು ಬೇಳೆ ಮಧ್ಯಪ್ರದೇಶವನ್ನು ಮಾಡಲ್ ಆಗಿ ಇಟ್ಟುಕೊಳ್ಳಬೇಕು ಎಂಬ ಅಭಿಪ್ರಾಯ ಇದ್ದರೆ ಕೇಂದ್ರ ಸರ್ಕಾರದವರು ಆ ವಿವರಗಳನ್ನೆಲ್ಲಾ ತರಿಸಿಕೊಳ್ಳಲಿ. ಮಧ್ಯಪ್ರದೇಶದಲ್ಲಿ ಮಾಡಿರುವುದು ಒಳ್ಳೆಯದು ಎಂಬ ಅಭಿಪ್ರಾಯ ಇಟ್ಟು ರಾಜ್ಯಗಳನ್ನು ಚರ್ಚೆಗೆ ಕರೆದು ಅಂತಿಮವಾದ ತೀರ್ಮಾನಕ್ಕೆ ಅವರು ಬರುವುದಾದರೆ we have no objection but the whole point is ಚರ್ಚೆಗೆ ನಾವು ರೆಡಿ ಇದ್ದೇವೆ. ಏಕೆಂದರೆ ರೈತರಿಗೆ ಅನುಕೂಲವಾಗುವ ಹಾಗಿದ್ದರೆ ನಾವು ಏತಕ್ಕೆ ಅಡ್ಡಿ ಬರಬೇಕು ಸ್ವಾಮಿ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ತಮ್ಮ ಇನ್‌ಫ್ಲೂಯೆನ್ಸ್‌ಗಳನ್ನುಪಯೋಗಿಸಿ ಅದನ್ನು ಕರೆಯುವ ಹಾಗೆ ಮಾಡಿ. ಅನುಕೂಲವಾಗುವ ಹಾಗೆ ಮಾಡಿ. ಬೇರೆ ಏನು ಮಾರ್ಗ ಇದೆ?

ಶ್ರೀ ಎಸ್. ಬಂಗಾರಪ್ಪ – ಯಡಿಯೂರಪ್ಪನವರೇ, ಇನ್‌ಫ್ಲೂಯೆನ್ಸ್ ಎಂದರೆ ಹೆಚ್ಚು ಎಂದರೆ ಪ್ರಧಾನ ಮಂತ್ರಿಗಳ ಹತ್ತಿರ ಹೇಳಿ ಬಂದಿದ್ದೇನೆ. ಆ ರೀತಿ ಒತ್ತಡ ತರುವುದು ಬಿಟ್ಟರೆ ಅದಕ್ಕಿಂತ ಹೆಚ್ಚಾಗಿ ಯಾವ ಮುಖ್ಯಮಂತ್ರಿಯೂ ಮಾಡುವುದಕ್ಕೆ ಬರುವುದಿಲ್ಲ ಎಂಬತಕ್ಕ ಮಾತನ್ನು ತಾವೂ ಒಪ್ಪುತ್ತೀರಿ. ಮಧ್ಯಪ್ರದೇಶದ ವಿಚಾರ ಕೂಡ ಒಳ್ಳೆಯದಿದ್ದರೆ, ಅದನ್ನು ಮಾಡುವಹಾಗಿದ್ದರೆ. ಎಲ್ಲರಿಗೂ ಅನುಕೂಲವಾಗುವಹಾಗೆ ಇದ್ದರೆ ಮಾಡೋಣ. ಅದು ಒಳ್ಳೆಯದಾಗಿದ್ದರೆ. ಏಕೆಂದರೆ ಆ ವಿವರಗಳು ನನಗೆ ಗೊತ್ತಿಲ್ಲ. ಬೇಕಾದರೆ ಹಾಗೆ ಮಾಡಿ ಎಂದು ಹೇಳೋಣ. ನಮ್ಮ ಆಭ್ಯಂತರ ಏನೂ ಇಲ್ಲ. ಇದು ಕೇಂದ್ರದವರು ಮಾಡಬೇಕೇ ವಿನಃ ಮಧ್ಯಪ್ರದೇಶದವರು ಮಾಡಿದ್ದನ್ನು ನಾವು ಫಾಲೊ ಮಾಡುವುದಕ್ಕೆ ಬರುವುದಿಲ್ಲ ಎಂಬ ಮಾತನ್ನು ತಾವೂ ಒಪ್ಪುತ್ತೀರೆಂದು ಭಾವಿಸಿದ್ದೇನೆ. ಕೇಂದ್ರದ ಮೇಲೆ ಒತ್ತಡ ತರೋಣ. ಇಷ್ಟರಮಟ್ಟಿಗೆ ಮಾತ್ರ ಹೇಳಿ ರೈತರ ಸಾಲ ಜಪ್ತಿ ವಗೈರೆ ವಿಚಾರ ಹೇಳಿದ್ದೀರಲ್ಲ certainly we are going to take action not to allow our officers to go for recoveries by adopting coercive methods. ಅದರ ಬಗ್ಗೆ ಅನುಮಾನ ಬೇಡ. ಸಂಪೂರ್ಣ ಜವಾಬ್ದಾರಿ ನಮಗಿರಲಿ. ಏನೂ ತೊಂದರೆ ಆಗುವುದಿಲ್ಲ.

ಶ್ರೀ ಬಿ. ಎಚ್. ಬನ್ನಿಕೋಡ :- ಕರಾರುರಹಿತವಾಗಿ ಸಾಲ ಮನ್ನಾ ಮಾಡಬೇಕು ಎಂಬ ಅಭಿಪ್ರಾಯ ತಮಗಿರುವಾಗ, ಈ ಸದನದಲ್ಲಿರುವಾಗ, ಮತ್ತು ರಾಜ್ಯದ ಎಲ್ಲಾ ಜನರಿಗೂ ಇರುವಾಗ ಕೋಯರ್‌ಸೀವ್ ಮೆತಡ್‌ನಲ್ಲಿ ಮಾಡಬೇಡಿ ಎಂದು ಹೇಳುತ್ತೇನೆ ಅಂದರೆ ಸಾಲ ವಸೂಲು ಮಾಡಿ ಎಂದು ಹೇಳಿದಂತಾಗುತ್ತದೆ

ಶ್ರೀ ಎಸ್. ಬಂಗಾರಪ್ಪ :- ಕೋಯರ್‌ಸೀವ್ ಮತಡ್‌ನಲ್ಲಿ ಮಾಡಬೇಡಿ ಎಂದರೆ ವಸೂಲು ಮಾಡಬಾರದು ಎಂದು ಅರ್ಥವಾಗುತ್ತದೆ. ಮಾಡಿ ಎಂದು ಆಗುವುದಿಲ್ಲ.

ಅಧ್ಯಕ್ಷರು :- ಯಾರಾದರೂ ಸ್ವಸಂತೋಷದಿಂದ ಕೊಟ್ಟರೆ ಅದಕ್ಕೆ ಏತಕ್ಕೆ ಅಡ್ಡ ಬರಬೇಕು ಎಂಬುದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಎಚ್. ಬನ್ನಿಕೋಡ್ :- ಇನ್ನೂ ಕರಾರು ಗೊತ್ತಿಲ್ಲ. ಕೇಂದ್ರ ಸರ್ಕಾರ ಏನು ಮಾಡುತ ದೆ ಎಂದು ಗೊತ್ತಿಲ್ಲ. ರಾಜ್ಯ ಸರ್ಕಾರದವರು ನಿರ್ಣಯಕ್ಕೆ ಬಂದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಎಲ್ಲಾ ರೈತರ ಸಾಲ ವಸೂಲಾತಿ ಸ್ಥಗಿತಗೊಳಿಸಿದರೆ ಅದರ ಲಾಭ ರೈತರಿಗೆ ಸಿಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ :- ಬನ್ನಿಕೋಡ್ ಅವರೇ, ಒಂದು ವಿಚಾರ ಗಮನದಲ್ಲಿಟ್ಟಿರಿ. ಎಲ್ಲಾ ರೀತಿಯ ಸಾಲ ಮನ್ನಾ ಮಾಡುವ ವಿಚಾರದಲ್ಲಿ ನಾವು ಚರ್ಚೆ ಮಾಡುತ್ತಿಲ್ಲ. Let us be very very clear on one point ನಾವು ಚರ್ಚೆ ಏನು ಮಾಡುತ್ತಿದ್ದೇವೆ ಎಂದರೆ ಒಂದು ಮಿತಿಗೆ ಸೀಮಿತಗೊಳಿಸಿ ನಾವು ಚರ್ಚೆ ಮಾಡುತ್ತಿದ್ದೇವೆ. ಇದನ್ನು ಎಲ್ಲಾ ಪಕ್ಷದವರೂ ಒಪ್ಪಿಕೊಂಡಿದ್ದೇನೆ. 10 ಸಾವಿರ ರೂಪಾಯಿವರೆಗೆ ಎಂಬ ವಿಚಾರ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ ಆ ಮಿತಿಗೆ ಒಳಪಟ್ಟು ಹೇಳುತ್ತಿದ್ದೇನೆ. ಒಂದು ವೇಳೆ 10 ಸಾವಿರದ ಮೇಲೆ ಇರತಕ್ಕ ಸಾಲ ಇದ್ದರೆ ಅದನ್ನು ಮನ್ನಾ ಮಾಡುವ ವಿಚಾರ ಮಾತನಾಡುತ್ತಿಲ್ಲ. ಬಹುಶಃ ತಾವು ಹೇಳಬೇಕಾದರೆ ಎಲ್ಲಾ ರೀತಿಯ ಸಾಲ ಎಂದು ಹೇಳಿಬಿಡಿ.

ಶ್ರೀ ಬಿ. ಎಚ್. ಬನ್ನಿಕೋಡ್ :- 10 ಸಾವಿರದೊಳಗಿನ ಸಾಲದ ಬಗ್ಗೆ ಹೇಳುತ್ತಿದ್ದೇನೆ. 15 ಸಾವಿರ ರೂಪಾಯಿ ಸಾಲ ಇದ್ದರೆ 5 ಸಾವಿರ ರೂಪಾಯಿಗಳನ್ನು ಬಲಾತ್ಕಾರದಿಂದ ವಸೂಲು ಮಾಡಿ. 10 ಸಾವಿರ ರೂಪಾಯಿಗಳನ್ನು ಬಿಡಿ.

ಶ್ರೀ ಎಸ್. ಬಂಗಾರಪ್ಪ :- ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಮಿತಿಗೊಳಿಸಿ ಚರ್ಚೆ ಮಾಡಿ. ಇನ್ನೊಂದು ಮಾತು ಏನೆಂದರೆ ಕೋಯೆರ್ಸಿವ್ ಮೆತಡ್ ಎಂಬ ಮಾತನ್ನು ಬಿಟ್ಟಕ್ಕೆ ಹೇಳುತ್ತೇನೆಂದರೆ ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಅವರಾಗಿಯೇ ಕೊಟ್ಟರೆ ವಸೂಲಾತಿ ಮಾಡುತ್ತಿದ್ದೇವೆ ಎಂದು ಸಬಾರ್ಡಿನೇಟ್‌ಗಳವರಿಗೆ ತೋರಿಸುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ರೀಫೈನಾನ್ಸ್ ವಿಚಾರ ಇದೆ. Please do not forget that aspect. It is in our own interest, in the larger interest of farming community or the farmers who have taken loans. ನಿಮ್ಮ ದೃಷ್ಟಿಯಿಂದ ಅದು. ಅವರಾಗಿಯೇ ಕೊಟ್ಟರೆ Yes, we have kept up recoveries here. Please see the figures. ನಿಮ್ಮ ಸೊಸೈಟಿಗೆ ರೀಫೈನಾನ್ಸ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಚೆಚ್. ಬನ್ನಿಕೋಡ್ :- ಮಾನ್ಯ ಮುಖ್ಯಮಂತ್ರಿಗಳು ಅದಷ್ಟು ಬೇಗ ಕರಾರುರಹಿತವಾದ ಸಾಲ ಮನ್ನಾ ನಿರ್ಣಯವನ್ನು ತೆಗೆದುಕೊಂಡರೆ ಅನೇಕ ರೈತರಿಗೆ ಅನುಕೂಲವಾಗುತ್ತದೆ. ಅಂತಹ ಸಾಲವನ್ನು ವಸೂಲಿ ಮಾಡುವುದು ಸೂಕ್ತವಲ್ಲ. ಕೊಟ್ಟಪ ಕೋಡಂಗಿ, ತೆಗೆದುಕೊಂಡವ ವೀರಭದ್ರ ಎನ್ನುವ ಹಾಗೆ ಈ ರಾಜ್ಯದ ಗತಿಯಾಗಿದೆ. ಕೆಲವರಿಂದಲೇ ಸಾಲವನ್ನು ವಸೂಲಿ ಮಾಡುವುದು ಸೂಕ್ತವಲ್ಲ. 10 ಸಾವಿರ ರೂಪಾಯಿಗಳ ಒಳಗಿನ ಎಲ್ಲಾ ಸಾಲವನ್ನು ವಾಪಸ್ ಪಡೆಯುವುದನ್ನು ಬಂದ್ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಚೆಚ್. ಹನುಮೇಗೌಡ :- ಯಾರು 1986 ನೇ ಇಸವಿಯಿಂದ ಒಂದಕ್ಕೆ ಸಾಲ ತೆಗೆದುಕೊಂಡು ಡಿಫಾಲ್ಟರ್ ಆಗಿದ್ದು, 1989 ಕ್ಕೂ ಡಿಫಾಲ್ಟರ್ ಆಗಿರುತ್ತಾರೆ. ಅಂತಹವರ ಸಾಲವನ್ನು ಮನ್ನಾ ಮಾಡಿದ್ದಾರೆಯೇ ವಿನಃ ಯಾರು ಗೌರವಕ್ಕೆ ಅಂಜಿ ಪಡೆದುಕೊಂಡ ಸಾಲವನ್ನು ಕಟ್ಟಿಕೊಂಡು ಬಂದು ಈಗ ಕಟ್ಟಬೇಕೋ ಅವರ ಸಾಲ ಮನ್ನಾ ಆಗಿಲ್ಲ. 1986 ಕ್ಕೆ ಹಿಂದೆ ತೆಗೆದುಕೊಂಡು ಡಿಫಾಲ್ಟರ್ ಆಗಿದ್ದಾರೋ ಅಂತಹವರ ಸಾಲ ಮನ್ನಾ ಮಾಡಬೇಕೆಂದು ಈಗಿನ ನಿರ್ಣಯ ಎಂದು ಕಾಣುತ್ತದೆ. ಹೀಗಿರುವಾಗ 1987, 1988, 1989 ರಲ್ಲಿ ಯಾವ ಬಡವರು ಸಾಲವನ್ನು ತೆಗೆದುಕೊಂಡು ವಾಪಸ್ ಕಟ್ಟಿರುತ್ತಾರೋ ಅವರಿಗೆ ಯಾವುದೇ ಅನುಕೂಲವಾಗುವುದಿಲ್ಲ. ಯಾರು ಪರ್ಮನೆಂಟ್ ಡಿಫಾಲ್ಟರ್ ಆಗಿದ್ದು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ ಅಂತಹವರಿಗೆ ಸಹಾಯ ಆಗಿದೆ. ಯಾರು ತಮ್ಮ ಪದಾರ್ಥಗಳನ್ನು ಮಾರಿ ತಮ್ಮ ಸಾಲವನ್ನು ಕಟ್ಟಿರುತ್ತಾರೆಯೋ ಅಂತಹವರಿಗೆ ಈ ಯೋಜನೆ

ಯಿಂದ ಅನುಕೂಲ ಆಗುವುದಿಲ್ಲ. ಇವತ್ತು ದೇಶದಲ್ಲಿ ಅರ್ಧ ಭಾಗ ಕ್ಷಾಮ ಬಂದಿದೆ. ಬೆಳೆ ಇಲ್ಲದೇ ಕುಡಿಯುವ ನೀರು ಸಿಗದೇ, ಕೂಲಿ ಇಲ್ಲದೇ ಜನ ವಲಸೆ ಹೋಗಿದ್ದಾರೆ. ಇಂತಹ ಸಮಯದಲ್ಲಿ ಸಹಕಾರಿ ಸಂಘದವರು ಮನೆ ಜಪ್ತಿ ಮಾಡಿ ಕೈಗೆ ಸಿಕ್ಕ ಸಾಮಾನುಗಳನ್ನು ಹರಾಜು ಮಾಡುತ್ತಿದ್ದಾರೆ. ದನಕರುಗಳನ್ನು ಹರಾಜು ಮಾಡುತ್ತಿದ್ದಾರೆ. ಇವತ್ತು ಅವರ ಗತಿ ಏನು ? ಇವತ್ತು 700 ರಿಂದ 800 ಅಡಿ ಆಳದವರೆಗೂ ಬೋರ್ ಹಾಕಿದರೂ ನೀರು ಸಿಗದ ಸ್ಥಿತಿ ಅಲ್ಲಿದೆ. 2–3 ವರ್ಷಗಳ ಹಿಂದೆ ಕೊಟ್ಟ ಸಾಲದ ವಸೂಲಾತಿಗೆ ಇವತ್ತು ಬಂದು ಮನೆಗಳ ಜಪ್ತಿ ಮಾಡುತ್ತಿದ್ದಾರೆ. ಈ ನಿರ್ಗತಿಕ ಜನರು ಎಲ್ಲಿಂದ ಹಣ ಕಟ್ಟುತ್ತಾರೆ ? ಈ ಎರಡೂ ವಿಷಯಗಳ ಬಗ್ಗೆ ಗಮನ ಹರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಕೈಮುಗಿದು ಕೇಳುತ್ತೇನೆ. ಸಾಲ ಮನ್ನಾ ಮಾಡುವುದಾದರೆ ಈ ಕ್ಷಣದವರೆಗೆ ಯಾರ ಸಾಲ 10 ಸಾವಿರಕ್ಕೆ ಒಳಪಟ್ಟು ಇದೆಯೋ ಅವರ ಸಾಲವನ್ನು ಮನ್ನಾ ಮಾಡಬೇಕು. ಇವತ್ತು ಹಳ್ಳಿಗಳಲ್ಲಿ ಬರಗಾಲ ಬಂದು, ಬೆಳೆ ಇಲ್ಲದೇ, ಕುಡಿಯುವ ನೀರು ಇಲ್ಲದೇ, 10 ಸೇರು ರಾಗಿ, ಭತ್ತ ಇಲ್ಲದ ಸಮಯದಲ್ಲಿ ಕೋ–ಆಪರೇಟಿವ್ ಸೊಸೈಟಿಗಳವರು, ಬ್ಯಾಂಕಿನವರು ಜಪ್ತಿ ಮಾಡುತ್ತಿದ್ದಾರೆ ಇದನ್ನು ನಿಲ್ಲಿಸ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ :– 1986 ಕ್ಕಿಂತಲೂ ಹಿಂದೆ ಪಡೆದ ಸಾಲವನ್ನು ಮನ್ನಾ ಮಾಡಲಾಗು ವುದು ಎಂದು ಹೇಳಿದ್ದಾರೆ. ಸಣ್ಣ ಕಾಫಿ ಬೆಳೆಗಾರರು 1986 ಕ್ಕಿಂತಲೂ ಮೊದಲು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಸಾಲ ಪಡೆದಿದ್ದು ಅಂತಹವರ ಮನೆಗಳನ್ನೂ ಸಹಾ ಈಗ ಜಪ್ತಿ ಮಾಡಲಾಗುತ್ತಿದೆ. ಇದನ್ನೂ ಗಮನಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ರಾಜುಗೌಡ :– ಅಧ್ಯಕ್ಷರೇ, 2–10–89 ಕ್ಕೆ ಏನು 10 ಸಾವಿರ ರೂಪಾಯಿ ಮನ್ನಾ ಮಾಡಿದ್ದು ಅದನ್ನು ಸರ್ಕಾರ ಇನ್ನೂ ತುಂಬಿರುವುದಿಲ್ಲ. ಈಗ 2–10–89 ರಿಂದ ಈಚೆಗೆ ಬಡ್ಡಿಯನ್ನು ಕೊಡಬೇಕೆಂದು ಬ್ಯಾಂಕಿನವರು ಹಾಗೂ ಸೊಸೈಟಿಯವರು ವಸೂಲಿ ಮಾಡುತ್ತಿದ್ದಾರೆ. ಸರ್ಕಾರ ಸಾಲವನ್ನು ತುಂಬಿಕೊಡುವು ದಿದ್ದು. ಇದಕ್ಕೆ ರೈತರಿಂದ ಬಡ್ಡಿಯನ್ನು ವಸೂಲಿ ಮಾಡಬಾರದು. ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕು ಗಳವರು 2–10–89 ಕ್ಕಿಂತ ಈಚಿನ ಅವಧಿಗೆ ಬಡ್ಡಿಯನ್ನು ವಸೂಲಿ ಮಾಡುತ್ತಿದ್ದಾರೆ.

ಆದ್ದರಿಂದ ಸರಕಾರ ಸಾಲ ತುಂಬುವತನಕ 2–10–89 ರಿಂದ ಬಡ್ಡಿಯನ್ನು ವಸೂಲು ಮಾಡುತ್ತಿದಾರೆ. ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಹತ್ತು ಸಾವಿರದ ಒಳಗೆ ಇರತಕ್ಕಂತಹವರಿಂದ ಬಡ್ಡಿ ಯನ್ನು ವಸೂಲು ಮಾಡಬಾರದೆಂದು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸಹಕಾರ ಸಂಘಗಳಿಗೆ ಸೂಚನೆ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಸಾಲಮನ್ನಾ ವಿಚಾರ ಬಹಳ ಗಂಭೀರವಾಗಿರತಕ್ಕಂತಹ ವಿಚಾರ. ದಯಮಾಡಿ ಈ ಸಾಲ ಮನ್ನಾ ವಿಚಾರದ ಬಗ್ಗೆ ಈ ಅಧಿವೇಶನ ಮುಗಿಯುವದರೊಳಗೆ ಒಂದು ಸಮಯವನ್ನು ಗೊತ್ತು ಮಾಡಿ. ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ದಿನಾಂಕ 2–10–89 ಕ್ಕಿಂತ ಮೊದಲು ಆಣೆವಾರಿ ಪದ್ಧತಿ ಏನು ಇತ್ತು ಅದರ ಮೇಲೆ ಸಾಲ ಮನ್ನಾ ಮಾಡಬೇಕೆಂಬ ವಿಚಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಮತ್ತು ನಮ್ಮ ತಾಲ್ಲೂಕು ವ್ಯಾಪ್ತಿಗೆ ಬರತಕ್ಕಂತಹ ಕಡೆಯಲ್ಲಿ ಯಾವ ರೈತರಿದ್ದಾರೆ ಅವರಿಗೆ ಯಾವ ರೀತಿಯ ಪ್ರಯೋಜನವೂ ಆಗಿಲ್ಲ. ಇದು ಮೊಸಳೆ ಕಣ್ಣೀರು ಒರೆಸುವ ಹಾಗೆ ಇದೆ. ರೈತರ ಸಾಲದ ಬಗ್ಗೆ ಹಿಂದೆ ಕೇಂದ್ರ ಸರ್ಕಾರ ಹೇಳಿದಂಥಾದ್ದು ಬರೀ ಪ್ಲೇಳ್ಳಾಗೆದೆ ಇದು ಎಲ್ಲರಿಗೂ ಗೊತ್ತಿದೆ. ರೈತರಿಗೆ ಒಳ್ಳೆಯ ದಾಗಬೇಕೆಂಬ ದೃಷ್ಟಿಯಲ್ಲಿ 50 ಭಾಗ ದಷ್ಟನ್ನು ನಮ್ಮ ರಾಜ್ಯ ಸರ್ಕಾರ ಕೊಡಬೇಕೇ ಅಥವಾ 50 ಭಾಗವನ್ನು ಕೇಂದ್ರ ಸರ್ಕಾರ ಕೊಡಬೇಕೇ ಎಂಬ ವಿಚಾರ ಕೂಡ ಇದೆ. ರೈತರ ಬಗ್ಗೆ ಒಳ್ಳೆಯದಾಗಬೇಕೆಂಬ ದಿಸೆಯಲ್ಲಿ ಮಧ್ಯಪ್ರದೇಶದ ಸರಕಾರ ಕೂಡ ಯೋಚನೆ ಮಾಡುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕಾ ಪೇಳಿಕೆಯನ್ನು ಕೊಟ್ಟು ಸಾಲ ಮನ್ನಾ ಮಾಡಬೇಕೆಂಬ ಬಗ್ಗೆ ಪ್ರಧಾನ ಮಂತ್ರಿಯವರಿಗೆ ಮನವಿ ಮಾಡಿದ್ದೇವೆಂದು ಕೂಡ ಹೇಳಿ ದ್ದಾರೆ. ಇದರ ಬಗ್ಗೆ ವಿಚಾರವನ್ನು ತೀರ್ಮಾನ ಮಾಡಬೇಕು. ಅದರ ಜೊತೆಯಲ್ಲಿ ಪೆಡ್ಯೂಲ್ ಬ್ಯಾಂಕ್‌ನವರು ಏನು ಇದಾರೆ ಇವರು ರೈತರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ. ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ ಚೆಕ್ ಬಂದರೆ ಇಲ್ಲವೇ ಬ್ಯಾಂಕ್‌ನಲ್ಲಿ ಸಾಲದ ಹಣ ಮಂಜೂರಾಗಿ ಬಂದರೆ ಬ್ಯಾಂಕ್‌ನವರು ಯಾವ ಮುಲಾಜೂ ಇಲ್ಲದೆ ಆ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ. ಇದು ಸರಿ ಹೋಗಬೇಕಾದರೆ ಇದಕ್ಕೆ ಒಂದು ಅಂತಿಮ ತೆರೆ ಎಳೆಯಬೇಕು. ಮತ್ತು ರೈತರ ಪರವಾಗಿ ತಾವು ತೀರ್ಮಾನ ಮಾಡಬೇಕು.

ಅಧ್ಯಕ್ಷರು :– ವಿಚಾರಗಳು ಎಲ್ಲಾ ಒಂದೇ ತಾವು ಸಂಕ್ಷಿಪ್ತವಾಗಿ ಹೇಳಿ.

ಡಾ. ಎನ್. ಬಿ. ನಂಜಪ್ಪ :– ಬಹಳಷ್ಟು ದಿವಸ ಇದರ ಬಗ್ಗೆ ಎಲ್ಲರೂ ಚರ್ಚೆ ನಡೆಸಿದ್ದೇವೆ. ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ಸಾಲ ಮನ್ನಾ ಮಾಡುವ ವಿಚಾರದಲ್ಲಿ ಹೇಳಿದ್ದಾರೆ. ಮತ್ತು ಇದಕ್ಕೆ ಯಾವುದಾದ

ರೊಂದು ರಿಲೀಫ್‌ಅನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಇದನ್ನು ನಾವೆಲ್ಲರೂ ಒಪ್ಪುತ್ತೇವೆ. ಕರ್ನಾಟಕ ರಾಜ್ಯದಲ್ಲಿ ವ್ಯಾಪಕವಾಗಿ ಬರಗಾಲ ಬಂದಿರುವುದರಿಂದ 3 ವರ್ಷದಿಂದ ಸರಿಯಾದಂತಹ ಮಳೆ ಬೆಳೆಯಾಗದೇ ಇರುವುದರಿಂದ ರೈತರಿಗೆ ಇಂತಹ ಕಷ್ಟ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾವು ನಿರ್ದಿಷ್ಟವಾದ ನೀತಿ ಸರಕಾರ ತೆಗೆದುಕೊಂಡು ಇಷ್ಟು ಬಡ್ಡಿ ಮನ್ನಾ ಮಾಡುತ್ತೇವೆ 5–10 ಸಾವಿರ ರಿಲೀಫ್‌ನ್ನು ಕೊಡುತ್ತೇವೆ. ಇಂಥಾದ್ದರೊಳಗೆ ಮಾಡುತ್ತೇವೆ ಎಂದು ಹೇಳಬೇಕು. ಎಲ್ಲರಿಗೂ ಸಮವಾಗುವ ರೀತಿಯಲ್ಲಿ ಯೂನಿಫಾರಂ ಆಗಿ ಒಂದು ಪಾಲಿಸಿಯನ್ನು ಮಾಡಿ ಎಷ್ಟು ಜನ ಎಷ್ಟಾದರೂ ಸಾಲ ಮಾಡಿರಲಿ 10 ಸಾವಿರ ಕೆಳಗೆ ಇರತಕ್ಕಂತಹವರಿಗೆ ಮನ್ನಾ ಮಾಡುತ್ತೇವೆಂದು ಹೇಳತಕ್ಕಂಥಾದ್ದು ಇಲ್ಲವೇ ಒಡಿಯನ್ನು ಮನ್ನಾ ಮಾಡುತ್ತೇವೆ ಎಂದು ಹೇಳತಕ್ಕಂಥಾದ್ದು ಯಾವುದನ್ನಾದರೂ ಮಾಡಿದರೆ ಕರ್ನಾಟಕ ರಾಜ್ಯದ ರೈತರಿಗೆ ಅನುಕೂಲವಾಗುತ್ತದೆ. ಅವರು ಅದನ್ನು ಒಪ್ಪಿಕೊಳ್ಳುತ್ತಾರೆ. ಕೆಲವರು ಕೇಳತಕ್ಕಂಥಾದ್ದು ಕೆಲವರು ಕೇಳ್ದೇರು ಸುರಿಸತಕ್ಕಂಥಾದ್ದು ಕೊನೆಯಾಗುತ್ತದೆ. ಇದನ್ನು ಮಾಡಬೇಕು.

ಶ್ರೀ ಎಂ. ಪಿ. ವೆಂಕಟೇಶ್ :– ಸಾಲ ಮನ್ನಾ ಆಗುತ್ತದೆಂದು ಯಾವ ರೈತರೂ ಕೂಡ ಹಣವನ್ನು ಕಟ್ಟುತ್ತಿಲ್ಲ. ಪಿ. ಎಲ್. ಡಿ., ಬಿ. ಡಿ. ಸಿ. ಸಿ. ಬ್ಯಾಂಕ್‌ನವರು ಸಾಲ ವಸೂಲಿ ಮಾಡುತ್ತಿದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ ಸಾಲ ವಸೂಲು ಮಾಡುತ್ತೇವೆಂದು ಕಾರುಗಳನ್ನು ಭಾಡಿಗೆಗೆ ತೆಗೆದುಕೊಂಡು ಹೋಗಿ ಸಾಲ ವಸೂಲು ಮಾಡುತ್ತೇವೆಂದು ಹೇಳುತ್ತಾರೆ. ದಿವಸಕ್ಕೆ 300 ರೂಪಾಯಿ ಕಾರಿನ ಭಾಡಿಗೆ. ಡೀಸೆಲ್, ಪೆಟ್ರೋಲ್, ಖರ್ಚು ಹೀಗೆ ಎಲ್ಲಾ ಸೇರಿ 500–600 ರೂಪಾಯಿ ಬಿಲ್ ಮಾಡುತ್ತಾರೆ. ಹೀಗೆ ಲೆಕ್ಕಾ ಪಾಕಿ ಅದನ್ನು ರೈತರ ತಲೆಯ ಮೇಲೆ ಹಾಕುತ್ತಾರೆ. ಸಾಲ ವಸೂಲಾಗಿಲ್ಲವೆಂದು ಹೇಳುತ್ತಾರೆ. ಪ್ರತಿಯೊಂದು ತಾಲ್ಲೂಕಿನವರೂ. ಬ್ಯಾಂಕ್‌ನವರೂ ಹೀಗೆಯೇ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಹಾಗೂ ರೈತರಿಗೆ ಅನ್ಯಾಯವಾಗುತ್ತದೆ ಇದನ್ನು ನಿಲ್ಲಿಸಬೇಕು.

ಶ್ರೀ ಎಸ್. ಬಂಗಾರಪ್ಪ: ನಾವು ಎಷ್ಟು ಚರ್ಚೆ ಮಾಡಿದರೂ ಕೂಡ ಮಾನ್ಯ ಸದಸ್ಯರುಗಳು ಈ ಒಂದು ವಿಚಾರಕ್ಕೆ ಒಪ್ಪುತ್ತಾರೆಂದು ನಾನು ಪೂರ್ವ ಭಾವಿ ಹೇಳಿಕೆಯಲ್ಲೇ ಹೇಳಿದೆ. ನಿಮ್ಮ ಅಭಿಪ್ರಾಯಕ್ಕೂ ಸರಕಾರದ ಅಭಿಪ್ರಾಯಕ್ಕೂ ವ್ಯತ್ಯಾಸವೇನೂ ಇಲ್ಲ. ವ್ಯತ್ಯಾಸ ಬರುವುದಕ್ಕೆ ಕಾರಣವೇ ಇಲ್ಲ. ವಿರೋಧ ಪಕ್ಷ ಇರಬಹುದು ಆಡಳಿತ ಪಕ್ಷ ಇರಬಹುದು. ವಿರೋಧ ಪಕ್ಷದವರ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಮಾಡಿದಂತಹ ನೀತಿ ಮತ್ತು ಆದಕ್ಕೆ ತಾವೂ ಕೂಡ ಅಲ್ಲಿ ಬೆಂಬಲ ಕೊಟ್ಟಂತಹ ನೀತಿ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಸರ್ಕಾರದ ಅಭಿಪ್ರಾಯಕ್ಕೂ ವಿರೋಧ ಪಕ್ಷಗಳ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸ ಇಲ್ಲವೆಂದು ಬಹಳ ವ್ಯತ್ಯಾಸ ಇದೆ. ಏನು ವ್ಯತ್ಯಾಸವಿದೆ ಎಂದರೆ ನಾವು ಹಿಂದಿನ ಅಧಿವೇಶನದಲ್ಲಿ ಹೇಳಿದ್ದೆವು. ಇಲ್ಲಿ ರೈತರ ಸಾಲ ರದ್ದು ಮಾಡಿ ಎಂದು ಭಿಕ್ಷೆ ಕೇಳುವುದಕ್ಕೆ ಬಂದಿಲ್ಲ. ಸಾಲ ರದ್ದು ಮಾಡಿ ಎಂದು ಯಾವ ರೈತರೂ ಭಿಕ್ಷೆ ಕೇಳುವುದಕ್ಕೆ ಬಂದಿಲ್ಲ. ನೀವು ಸಾಲವನ್ನು ರದ್ದು ಮಾಡುವಂಥ ಕಾರ್ಯಕ್ರಮ ಏನು ಹಾಕಿದ್ದೀರಿ. ಅದನ್ನು ಏತಕ್ಕೆ ರದ್ದು ಮಾಡುತ್ತೀರಿ ಎನ್ನುವುದಕ್ಕೆ ಕಾರಣ ಕೇಳುತ್ತಿದ್ದೇವೆ. ಕಾರಣವಿಲ್ಲದೆ ಯಾವುದನ್ನೂ ರದ್ದು ಮಾಡಬಾರದು. ನಮಗೇನು ಭಿಕ್ಷೆ ಕೊಡಬೇಡಿ. ನಾವೇ ದೇಶಕ್ಕೆ ಅನ್ನ ಹಾಕುತ್ತಿರುವವರು. ಸನ್ಮಾನ್ಯ ಅಧ್ಯಕ್ಷರೇ. ಈ ಸಮಸ್ಯೆಯನ್ನು ಎದುರಿಸಲಿಕ್ಕೆ ಸರ್ಕಾರಕ್ಕೆ ಭಯವಾಗಿದೆ. ನಾವೇನು ಭಿಕ್ಷೆ ಬೇಡುತ್ತಿದ್ದೇವೆಯೇ ? ನಾವು ಭಿಕ್ಷೆಯನ್ನು ಬೇಡುತ್ತಿಲ್ಲ. ನಮಗೆ ಸಾಲವೇ ಬೇಡವೆಂದು ನಾವೆಲ್ಲರೂ ಹೇಳುತ್ತಿರುವುದು. ನಮಗೆ ಸಾಲ ಬೇಕಾಗಿಲ್ಲ. ನಮಗೆ ಬೇಕಾಗಿರುವುದು ನಮ್ಮ ಸರಕಾರದವರು ವೈಜ್ಞಾನಿಕವಾಗಿ ಲೆಕ್ಕವನ್ನು ಹಾಕಿದಂಥ ಬೆಲೆ. ವೈಜ್ಞಾನಿಕವಾಗಿ ಲೆಕ್ಕ ವನ್ನು ಹಾಕಿದಂಥ ನಿಗದಿಯಾದ ಬೆಲೆ ಬೇಕು. ಇಂಥ ಒಂದು ಬೆಲೆಯನ್ನು ಕೊಟ್ಟಲ್ಲಿ ನಾವು ನಿಮ್ಮ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಾಗಲಿ, ಸಹಕಾರಿ ಬ್ಯಾಂಕ್‌ಗಳಿಗಾಗಲಿ ಸಾಲಕ್ಕಾಗಿ ಬರುವುದಿಲ್ಲ. ಈ ಕಾರಣಕ್ಕಾಗಿ ಈ ದಿಕ್ಕಿನಲ್ಲಿ ಚರ್ಚೆಯಾಗಬೇಕೆನ್ನುವ ಮಾತನ್ನು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಸಾರಿ ಮಾನ್ಯ ಸಭಾನಾಯಕರು ಇದ್ದಾಗ ಈ ಧೈರ್ಯ ಮಾಡಲಿಲ್ಲ. ಇಂಥ ಒಂದು ಚರ್ಚೆಗೆ ಧೈರ್ಯ ಮಾಡಲಿಲ್ಲ. ನಿಮಗೆ ಧೈರ್ಯವಿದ್ದರೆ ಚರ್ಚೆ ಮಾಡಿ ಎಂದು ಸವಾಲು ಹಾಕಿದ್ದೆ. ಈಗ ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರಿಗೂ ಅದೇ ಸವಾಲನ್ನು ಹಾಕುತ್ತಿದ್ದೇನೆ. ಧೈರ್ಯವಿದ್ದರೆ ಚರ್ಚೆ ಮಾಡಿ. ಯಾವ ಕಾರಣಕ್ಕಾಗಿ ರದ್ದು ಮಾಡುತ್ತಿದ್ದೀರಿ. ಅದರ ಬಗ್ಗೆ ಧೈರ್ಯವಿದ್ದರೆ ಚರ್ಚೆ ಮಾಡಿ. ನಮಗೆ ಭಿಕ್ಷೆ ಬೇಡ. ನಾವು ಅನ್ನ ಹಾಕಿದ್ದೇವೆ. ನಾವು ಏನು ಅನ್ನ ಹಾಕಿದ್ದೇವೆ, ನಾವು ಎಷ್ಟು ಬಾಕಿ ಕೊಡಬೇಕೆನ್ನುವುದನ್ನು ನಮಗೆ ತಿಳಿಸಿ. ನಾವು ಇಷ್ಟು ಬಾಕಿ ಕೊಡಬೇಕೆನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ನಮ್ಮ ಚಿಂತನೆಯ ಹಿನ್ನೆಲೆಯಲ್ಲಿಯೇ ಇದ್ದು ವ್ಯಾಖ್ಯಾನ ಮಾಡಿ ಗ್ರಾಸ ಕೊಟ್ಟಿರುವುದಕ್ಕೆ ಅಧ್ಯಕ್ಷರ ಮುಖಾಂತರ ಅವ

ರಿಗೆ ಅಭಿನಂದಿಸುತ್ತೇನೆ. ಇದರಲ್ಲಿ ಎರಡು ವಿಚಾರಗಳು ಇವೆ. ಒಂದು ಸಾಲ ಮನ್ನಾ ಮಾಡಬೇಕೇ, ಬಿಡಬೇಕೇ ಎನ್ನುವುದು. ಸಾಲ ವಿಲ್ಲದಿದ್ದರೆ ಮನ್ನಾ ಮಾಡುವ ಪ್ರಶ್ನೆಯೇ ಬರುತ್ತಿರಲಿಲ್ಲ. ಮತ್ತೊಂದು ವಿಚಾರ ರೈತರು ಬೆಳೆದಿರತಕ್ಕಂಥ ಬೆಳೆಗೆ ನ್ಯಾಯವಾದ ಬೆಲೆ, ವೆಜ್ಞಾನಿಕವಾಗಿರಬೇಕು ಎನ್ನುವುದು ನಮ್ಮ ಮುಂದಿರ ತಕ್ಕಂಥ ಎರಡು ವಿಚಾರಗಳು. ಇದರ ಬಗ್ಗೆ ಚರ್ಚೆ ಮಾಡಬೇಕೆನ್ನುವುದಕ್ಕೆ ಯಾರೂ ಬೇಡವೆಂದು ಹೇಳುವುದಿಲ್ಲ. ನಾನು ಹೇಳಿದ್ದೇನೆ, ಬೆಂಬಲ ಬೆಲೆ ಕೊಡತಕ್ಕಂಥ ವಿಚಾರದಲ್ಲಿ ಇದು ನಮ್ಮ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದಲ್ಲಿರ ತಕ್ಕಂಥ ವಿಚಾರವೆಂದು ಹೇಳಿ. ಇದರ ಬಗ್ಗೆ ವಿವರಣೆಗೆ ಹೋಗುವುದಿಲ್ಲ. ರೈತರು ಭಿಕ್ಷೆ ಬೇಡುವವರಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದಕ್ಕೆ ನಾನು ಕೂಡ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ರೈತ ಹಿಟ್ಟನ್ನು ಕೊಡುತ್ತಾನೆ, ರೊಟ್ಟಿಯನ್ನು ಕೊಡುತ್ತಾನೆ, ಅನ್ನವನ್ನು ಕೊಡುತ್ತಾನೆ. ಅವನ ಕೈಗೆ ಶಕ್ತಿಯನ್ನು ತುಂಬಿದ್ದರೆ ರಾಜ್ಯ ಸರ್ಕಾರ ಉಳಿಯುವದಿಲ್ಲವೆನ್ನುವ ಅಭಿಪ್ರಾಯ ನಿಮ್ಮದು ನಮ್ಮದೂ ಆಗಿದೆ. ಇವತ್ತು ನಮ್ಮ ಮುಂದಿರತಕ್ಕಂಥ ವಿಚಾರ ಒಬ್ಬ ರೈತ ಅನ್ನ ಕೊಡತಕ್ಕಂಥ ಕೈ, ಅನಿವಾರ್ಯ ಕಾರಣದಿಂದಾಗಿ ಸಾಲಗಾರನಾಗಿ ಬಿಟ್ಟಿದ್ದಾನೆ. ಕಾರಣವೇನೆನ್ನತಕ್ಕಂಥದ್ದು ಅವನ ತಪ್ಪಿನಿಂದವೆನ್ನುವ ಕಾರಣವೆಂದರೆ ಅಕ್ಷಮ್ಯ ಅಪರಾಧವಾಗುತ್ತದೆ. ತಪ್ಪು ಮಾಡಲಿಕ್ಕೆ ಕಾರಣವೇನೆನ್ನುವ ಮಾತನ್ನು ಹೇಳುವುದಾದರೆ ಪ್ರಕೃತಿದತ್ತವಾಗಿ ಬಂದಿರುವ ಬಡತನ. ಇದರ ಬಗ್ಗೆ ನಾವು ಇಲ್ಲಿ ಅನೇಕ ಸಾರಿ ಮಾತನಾಡಿದ್ದೇವೆ. ಅದು ಅವನ ವ್ಯಾಪ್ತಿಗೆ ಮೀರಿರುವ ಕಾರಣದ ಆಧಾರದ ಮೇಲೆ ಅವನು ಸಾಲಗಾರನಾಗಿದ್ದಾನೆ. ಇದನ್ನು ನಾವು ಹೇಳಿದ್ದೇವೆ, ಅದರಂತೆ ತಮ್ಮ ಅಭಿಪ್ರಾಯವು ಅದೇ ಆಗಿದೆ. ಸಾಲ ತೆಗೆದುಕೊಂಡರೆ ಅದು ಸಹಕಾರಿ ಸಂಘದ ಸಾಲ ಇರಬಹುದು ಅಥವಾ ಪಿ. ಎಲ್. ಡಿ. ಬ್ಯಾಂಕಿನ ಸಾಲ ಇರಬಹುದು. ಹ್ಯಾಂಪ್‌ಲೋನ್ ಇರಬಹುದು. ಸಾಲ ತೆಗೆದುಕೊಂಡರೆ ಸಾಲ ತೆಗೆದುಕೊಂಡಿಲ್ಲ ಎಂದು ಹೇಳತಕ್ಕಂಥ ಅಸತ್ಯದ ರೈತ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಿಕ್ಕುವುದಿಲ್ಲ. ಅವನು ನೀತಿವಂತ ಇದ್ದಾನೆ. ಈ ವಿಚಾರದ ಬಗ್ಗೆ ಅಪಾರವಾದ ನಂಬಿಕೆ ಇಟ್ಟುಕೊಂಡು ಸರ್ಕಾರದ ಪರವಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಾಲ ತೆಗೆದುಕೊಂಡಿದ್ದರೆ ಆತ ನಾನು ಸಾಲ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾನೆ. ಆದರೆ ಸಾಲವನ್ನು ಹಿಂತಿರುಗಿ ಕೊಡತಕ್ಕಂಥ ವಿಚಾರದಲ್ಲಿ ಸ್ವಾಮಿ, ನಾನು ಕೊಡುವುದಕ್ಕೆ ಆಗುವುದಿಲ್ಲ ಎಂದು ಯಾರಾದರೂ ಸುಳ್ಳು ಹೇಳಿರಬಹುದು. ಆದರೆ ಸಾಲ ತೆಗೆದುಕೊಂಡಿದ್ದೇ ಸುಳ್ಳು ಎಂದು ಹೇಳತಕ್ಕಂಥ ರೈತರು ನಮ್ಮವರಲ್ಲ. ಈ ಮಾತನ್ನು ನಾನು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ. ರೈತ ಕುಟುಂಬದಲ್ಲಿ ಹುಟ್ಟಿರತಕ್ಕಂಥ ನಾನು ಒಬ್ಬನೇ ಅಲ್ಲ, ತಾವು ಕೂಡ ಹುಟ್ಟಿಕೊಂಡು ಬಂದಿದ್ದೀರಿ. ಈ ಅಭಿಮಾನವನ್ನು ನಾವು, ನೀವು ಒಂದೇ ರೀತಿಯಾಗಿ ಇಟ್ಟುಕೊಂಡು ಬಂದಿದ್ದೇವೆ. ರೈತನ ಮನಸ್ಥಿತಿಗೆ, ರೈತನಿಗೆ ಗೌರವ ಕೊಡತಕ್ಕಂಥ ವಿಚಾರದಲ್ಲಿ ಅವನು ಸಾಲಗಾರನಾಗಿದ್ದರೆ, ಅದಕ್ಕೆ ಹಲವಾರು ಕಾರಣಗಳು ಇರಬಹುದು. ಮಳೆ ಬಾರದೆ ಬರಗಾಲ ಬಂದು, ಹಲವಾರು ಕಾರಣಗಳಿಂದ ಅವನು ಸಾಲಗಾರನಾಗಿ ಉಳಿದಿದ್ದಾನೆಯೇ ವಿನಹ ಸಹಕಾರ ಸಂಘದ ಸಾಲವನ್ನು ತಿಂದು ಬಿಡಬೇಕು, ಕೊಡಬಾರದು, ಕೈಗಾರಿಕಾ ಸಾಲ ಕೊಡಬಾರದು. ಬ್ಯಾಂಕಿನ ಸಾಲ ತೆಗೆದುಕೊಂಡು ತಿನ್ನಬೇಕು, ಕೊಡಬಾರದು ಎನ್ನತಕ್ಕಂಥ ಭಾವನೆ ಕರ್ನಾಟಕ ರಾಜ್ಯದ ರೈತರಿಗೆ ಇಲ್ಲ. ಈ ಮಾತನ್ನು ಪತ್ತೆಂಟು ಸಾರಿ ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದ್ದೇನೆ ಮತ್ತು ಶಾಸನಸಭೆಯ ಒಳಗಡೆಯೂ ಹೇಳಿದ್ದೇನೆ. ಇದೇ ಅಭಿಪ್ರಾಯದಿಂದ ಸರ್ಕಾರದ ನೀತಿಯಾಗಿ ಇಟ್ಟುಕೊಂಡು ಬಂದಿದ್ದೇವೆ. ಆರ್ಥಾತ್, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರ ಬಗ್ಗೆ ಅಪಾರವಾಗಿರತಕ್ಕಂಥ ಬೆಲೆ, ಗೌರವ ಇಟ್ಟು ನಾವು ಮಾತನಾಡಿದ್ದೇವೆ. ಇದರಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಕಾರಣ ಇಲ್ಲ. ಇವತ್ತು ರೈತ ಅನಿವಾರ್ಯವಾಗಿ ಸಾಲಗಾರನಾಗಿದ್ದಾನೆ. ಆದ್ದರಿಂದ ಒಂದು ಸಾರಿ ಅವನನ್ನು ಇದರಿಂದ ಬಿಡುಗಡೆ ಮಾಡಬೇಕೆನ್ನುವ ವಾದ ನಮ್ಮ ಮುಂದಿದೆ. ಇದನ್ನು ನಾವು ಎಲ್ಲಾ ಪಕ್ಷದವರೂ ಕೂಡ ಇಟ್ಟುಕೊಂಡಿದ್ದೇವೆ. ಅತನನ್ನು ಬಿಡುಗಡೆ ಮಾಡತಕ್ಕಂಥ ವಿಚಾರದಲ್ಲಿ ನಾವು ನಮ್ಮ ಮನಸ್ಸನ್ನು ಕೇಂದ್ರೀಕೃತಗೊಳಿಸಿ ಯಾವ ರೀತಿಯಾಗಿ ಮಾಡಬೇಕೆಂಬ ವಿಚಾರದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಇರಬಹುದು. How to go about ಎನ್ನತಕ್ಕಂಥ ವಿಚಾರದಲ್ಲಿ ವ್ಯತ್ಯಾಸ ಇದ್ದರೂ ಕೂಡ ಅಂತಿಮವಾಗಿ ಅವನನ್ನು ಬಿಡುಗಡೆ ಮಾಡಬೇಕು. ಅವನು ಸಾಲದ ಹೊರೆಹೊತ್ತು ರಸ್ತೆಯಲ್ಲಿ ಮರ್ಯಾದೆ ಕಳೆದುಕೊಳ್ಳಬಾರದು, ಎತ್ತು-ಗಾಡಿ ಮೊದಲಾದ ಚರಾಚರ ಆಸ್ತಿಗಳನ್ನು ಪರಾಜು ಹಾಕುವ ಪರಿಸ್ಥಿತಿ ಬರದೇ ಅವನನ್ನು ಮರ್ಯಾದೆಯಿಂದ ಸಮಾಜದಲ್ಲಿ ಗೌರವಯುತವಾಗಿ ಉಳಿಸಿಕೊಳ್ಳಬೇಕು ಎನ್ನುವ ಅಪೇಕ್ಷೆಯಿಂದ ನಾವು ಇಲ್ಲಿವಾದ ಮಾಡುತ್ತಿದ್ದೇವೆ. ಚರ್ಚೆ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಯಾವುದೇ ಪರಿಸ್ಥಿತಿ ಬಂದರೂ ಕೂಡ ನಾವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಹೊಣೆಯನ್ನು ಹೊತ್ತು ಅವನನ್ನು ಮರ್ಯಾದಸ್ಥನನ್ನಾಗಿ ಉಳಿಸಿ ಮತ್ತು ಅವನ ಕೈಗೆ ಶಕ್ತಿಯನ್ನು ತುಂಬಿಸಿದರೆ ಅನ್ನ ಕೊಡುವ ಕೈ ಮತ್ತಷ್ಟು ಬಲಯುತವಾದ ಕೈ ಆಗುತ್ತದೆ. That leads to getting more production

ಆ ದೃಷ್ಟಿಯಿಂದ ನಾವು ಈ ವಿಚಾರವನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇವೆ. ಆದ್ದರಿಂದ ಅವನನ್ನು ಸಾಲದಿಂದ ಬಿಡುಗಡೆ ಮಾಡಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ನಮಗೂ ನಿಮಗೂ ಇಲ್ಲಿ ಯಾರ್ಯಾರಿಗೂ ಇಲ್ಲ. ಹೋಗತಕ್ಕಂಥ ರೀತಿ ನೀತಿಯಲ್ಲಿ ಮತ್ತು ಯಾವ ರೀತಿ ಎಂದು ಹೇಳುವ ವಿಚಾರದಲ್ಲಿ ಮಾತನಾಡುತ್ತಿದ್ದೇವೆ. ಹೊರತು ಬೇರೇನೂ ಇಲ್ಲ. ಅದನ್ನು ಕೂಡ ನಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಇದನ್ನು ಕೂಡ ತಿಳಿಸುವವ

ರಿದ್ದೇವೆ. ಇದನ್ನು ನಾವು ನೀವು ಎಲ್ಲರೂ ಸೇರಿ ಹೇಳೋಣ. ಈ ಸಂದರ್ಭದಲ್ಲಿ ಅಂತಿಮವಾಗಿ ಶ್ರೀ ಶಿವರಾಮೇ ಗೌಡರು ಇದಕ್ಕೊಂದು ತೆರೆ ಎಳೆಯಬೇಕೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಈ ಚರ್ಚೆಯ ಫಲಿತಾಂಶ ಏನು ? ಈ ಕಳಕಳಿಯನ್ನು ತಾವು ವ್ಯಕ್ತಪಡಿಸಿದ್ದೀರಿ. ಸ್ವಾತಂತ್ರ್ಯ ಬಂದು 43 ವರ್ಷಗಳಿಂದಲೂ ಈ ಚರ್ಚೆ ನಡೆಯುತ್ತಿದೆ. ಆದರೆ ಫಲಿತಾಂಶ ಏನು ? ನಾನು ಧೈರ್ಯಮಾಡಿ ಸಾಲ ಮನ್ನಾ ಮಾಡುವಂಥ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸುತ್ತೇನೆಂದು ಹೇಳಬೇಕು. ರೈತರ ಸಾಲ ಮನ್ನಾ ಮಾಡುವುದು, ಇದೊಂದು ಅಭಿವೃದ್ಧಿಯ ಕಾರ್ಯ. ಅದಕ್ಕೆ ದಿಟ್ಟ ಹೆಜ್ಜೆಯನ್ನು ಇಡುತ್ತೇವೆ ಎಂಬ ಮಾತನ್ನು ನೀವು ಹೇಳಿದ್ದರೆ ಇಷ್ಟು ಹೊತ್ತು ಕಳಕಳಿಯಿಂದ ಮಾತನಾಡಿದ್ದಕ್ಕೆ ಒಂದು ಅರ್ಥ ಬರುತ್ತಿತ್ತು. ಈ ರಾಜ್ಯದ ರೈತನಿಗೆ ನಾವೆಲ್ಲರೂ ಗೌರವ ಕೊಡುತ್ತೇವೆ. ಆದರೆ ಅದನ್ನು ಬಿಟ್ಟು ಬೇರೆ ಎಲ್ಲಾ ಮಾತನಾಡಿ ಯಡಿಯೂರಪ್ಪ ಎದ್ದುನಿಂತಾಗ ನಿನಗೊಬ್ಬನಿಗೇ ಕಳಕಳಿ ಇರುವುದು ಎಂದು ಛೇಡಿಸಿ ಮಾತನಾಡಿದರೆ ಏನು ಅರ್ಥ ? ಬರಗಾಲ ಇದೆ. ರೈತರ ಸಾಲ ಮನ್ನಾ ಆಗಬೇಕು. ಕೇಂದ್ರ ಸರ್ಕಾರದ ಮನಸ್ಸು ಒಲಿಸುತ್ತೇವೆ. ಇಲ್ಲದಿದ್ದರೆ ಕೊಟ್ಟಿರುವ ಬೆಂಬಲವನ್ನು ವಾಪಸ್ಸು ತೆಗೆದು ಕೊಂಡು ಸರ್ಕಾರವನ್ನು ಇಳಿಸುತ್ತೇವೆ ಎಂದು ಹೇಳಿದರೆ ನಾವು ಗೌರವ ಕೊಡುತ್ತಿದ್ದೆವು.

1.35 ಪಿ. ಎಂ.

(ಗೊಂದಲ)

ಇವತ್ತು ರೈತ ಭಿಕ್ಷೆ ಬೇಡುತ್ತಿಲ್ಲ. ಆತನನ್ನು ಭಿಕ್ಷುಕನನ್ನಾಗಿ ಸರ್ಕಾರಗಳು ಮಾಡಿವೆ. ಆತನನ್ನು ಋಣಮುಕ್ತನನ್ನಾಗಿ ಮಾಡುವುದಕ್ಕೆ ದಿಟ್ಟ ಹೆಜ್ಜೆ ಇಡಿ.

(ಗೊಂದಲ)

ನಮಗೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಈ ರೀತಿ ಹೇಳ ತಕ್ಕಂಥಾದ್ದಕ್ಕೆ ಕಾರಣ ನನಗೆ ಕಂಡುಬರುತ್ತಿಲ್ಲ. ಏತಕ್ಕೆಂದರೆ, this is an accepted scheme, evolved by Government of India supported by all political parties including your own party. Do not forget this fact.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅದಕ್ಕೆ ನಾವು, ನಮ್ಮ ಬೆಂಬಲವನ್ನು ವಾಪಸ್ ತೆಗೆದುಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರು ಹೇಳಿದರು, ರೈತರ ಸಾಲಕ್ಕಾಗಿಯೇ ನಾವು ಬೆಂಬಲವನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂದು.

ಶ್ರೀ ಕೆ. ಎಸ್. ಈಶ್ವರಪ್ಪ :– ಅಲ್ಲಿ ರಾಮನನ್ನು ಮರೆತು ಕೇಂದ್ರ ಸರ್ಕಾರ ಹೋಯಿತು. ಇಲ್ಲಿ ರೈತರನ್ನು ಮರೆತರೆ ರಾಜ್ಯಸರ್ಕಾರವೂ ಹೋಗುತ್ತದೆ, ಇದು ತಮಗೆ ನೆನಪಿರಲಿ.....

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ :– ಮಾನ್ಯ ಮುಖ್ಯಮಂತ್ರಿಗಳು, ರೈತರ ಬಗ್ಗೆ ವೇದಾಂತ ಹೇಳಿದ್ದು, ರೈತರ ಬಗ್ಗೆ ವಿಶ್ವಾಸ ಇದೆ, ರೈತರ ಕಳಕಳಿಯನ್ನು ಒಪ್ಪಿದ್ದೇವೆಂದು ಹೇಳಿದ್ದಾರೆ. ಆದರೆ, ಈ ರಾಜ್ಯದ ನಾಲ್ಕು ಕೋಟಿ ಜನ ರೈತರನ್ನು ಋಣಮುಕ್ತರನ್ನಾಗಿ ಮಾಡುತ್ತಾರೆಂದು ನಂಬಿದ್ದಾರೆ. ದಯವಿಟ್ಟು, ತಾವು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಹೊರಿಸಿ, ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದನ್ನು ಮಾಡಬಾರದು.

ಶ್ರೀ ಎಸ್. ಹೆಚ್. ಕೌಜಲಗಿ :– ರಿಕವರಿ "ಸ್ಪೀ" ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ, ಈ ಅಕೌಂಟ್ ನಾವು ಹೇಳಿದ್ದೇವೆ. ತಾವು ತಡವಾಗಿ ಬಂದಿದ್ದೀರಿ. ಇದರ ಬಗ್ಗೆ ಎಲ್ಲರಿಗೂ ಕಳಕಳಿ ಇದೆ ಎನ್ನುವುದನ್ನು ಹೇಳಿದ್ದೇನೆ. I have answered that point I think I have covered all the points ಮತ್ತೆ ರಿಪಿಟೇಷನ್ ಆಗುತ್ತದೆ ಎಂಬ ಭಾವನೆ ನನಗೆ ಬರುತ್ತದೆ. ಇದರಲ್ಲಿ ಎಲ್ಲಾ ಪಕ್ಷಗಳ evolved ಸ್ಕೀಮ್ ಇದೆ, evolved scheme by the Government of India ಈ ಸ್ಕೀಮ್‌ಗೆ ರಾಜ್ಯ ಸರ್ಕಾರಗಳು ಬದ್ಧವಾಗಿರುವುದರಿಂದ, includirg our own State Government, we will accept that theory, and go ahead. ಕಂಡೀಷನ್ಸ್ ಮತ್ತೊಂದು ವಿಚಾರದಲ್ಲಿ ಆಮೇಲೆ ಕೆಲವು ವಿವರಣೆಗಳು ಬರುವವರೆಗೆ ಕಾಯುತ್ತೇವೆ. ಮತ್ತೆ ಈ 10 ಸಾವಿರದವರೆಗಿನ ಸಾಲದವರಿಗೆ ತೊಂದರೆ ಇದ್ದರೆ, ಮತ್ತೊಂದು ಸಾರಿ ಜಪ್ತಿ ಮಗೈರೆ ಆಗದಹಾಗೆ ನೋಡಿ ಕೊಳ್ಳುವ ಜವಾಬ್ದಾರಿ ನನ್ನದು ಎಂದು ಹೇಳಿದ್ದೇವೆ. ಇದಕ್ಕಿಂತ ಹೆಚ್ಚು ಹೇಳಿದರೆ ಉಪಯೋಗವಾಗಲಾರದು. I think we must stop at this.

ಶ್ರೀ ಡಿ. ಬಿ. ಚಂದ್ರೇಗೌಡ :– ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಸರಿಯಾಗಿ ನಡೆದುಕೊಳ್ಳಲಿಲ್ಲ. ಆ ಕಾರಣದಿಂದ ಸರ್ಕಾರದ ಕಾಲೆಳೆದೆವು ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಇದು ದಾಖಲೆಯೊಳಗೆ ಇರಬೇಕು. ಏಕೆಂದರೆ ಸಾರ್ವಜನಿಕರಿಗೆ ಗೊತ್ತಾಗಬೇಕು.

ಅಧ್ಯಕ್ಷರು :– ನಾನು ಇದನ್ನು ಎಕ್ಸ್‌ಪಂಜ್ ಮಾಡಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಸರ್ಕಾರ ತುರ್ತಾಗಿ ರೈತರ ಸಾಲದ ವಸೂಲಾತಿಗೆ ತಡೆಯಾಜ್ಞೆ ನೀಡಬೇಕು. ಕೇಂದ್ರ ಸರ್ಕಾರದ ಕಂಡೀಷನ್ಸ್ ತೆಗೆದುಹಾಕಿ, 10 ಸಾವಿರದವರೆಗೆ ಸಣ್ಣ ರೈತರು ಇರಬಹುದು. ದೊಡ್ಡ ರೈತರು ಇರಬಹುದು. ಅವರು ಈ ಸಾಲಪನ್ನು ಮನ್ನಾ ಮಾಡುವ ಕಾರ್ಯಕ್ರಮಕ್ಕೆ ಒಪ್ಪದಿದ್ದರೆ, ರಾಜ್ಯ ಸರ್ಕಾರವೇ ತನ್ನ ಬೊಕ್ಕಸದಿಂದ ತುಂಬಿ ಕೊಡಬೇಕು. ಕೇವಲ ಮೊಸಳೆ ಕಣ್ಣೀರು ಸುರಿಸುವುದನ್ನು 13 ವರ್ಷಗಳಿಂದ ಕೇಳಿದ್ದೇವೆ. ಇಲ್ಲದೇ ಹೋದರೆ, ಇವತ್ತಿನಿಂದ, ಈ ಸದನ ಮುಗಿಯುವವರೆಗೆ ನಾವು ಯಾವದೇ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲ. ರೈತರ ಸಾಲ ಮನ್ನಾ ಮಾಡುವ ಯೋಜನೆ ಬಗ್ಗೆ ಸ್ಪಷ್ಟವಾಗಿ, ಹೇಳಬೇಕು. ಮತ್ತೆ ವಸೂಲಾತಿಗೆ ತಡಯಾಜ್ಞೆ ಮಾಡಿ, ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸುವುದಕ್ಕೆ ನಾವೆಲ್ಲಾ ಹೋಗೋಣ. ಇದು ಆಗಲಿಲ್ಲ ಎಂದಾಗ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಯಾವರೀತಿ ತನ್ನ ಬೊಕ್ಕಸದಿಂದ ಹಣವನ್ನು ತುಂಬಿ, ಈ 10 ಸಾವಿರದವರೆಗಿನ ಸಾಲವನ್ನು ಮನ್ನಾ ಮಾಡಿದ್ದಾರೋ, ಅದೇ ರೀತಿ ನೀವೂ ಕೂಡ ಮಾಡಬೇಕು. ಈ ಬಗ್ಗೆ ನಮಗೆ ಸ್ಪಷ್ಟವಾದ ಭರವಸೆಯನ್ನು ಕೊಡುವವರೆಗೆ, ನಾವು ಈ ಸದನದಲ್ಲಿ ಧರಣಿ ಕೂಡುತ್ತೇವೆ.

(ಮಾನ್ಯ ಯಡಿಯೂರಪ್ಪನವರು, ವಿಧಾನ ಸಭೆಯ ಮಧ್ಯಭಾಗದಲ್ಲಿರತಕ್ಕ ಖಾಲಿ ಜಾಗದಲ್ಲಿ ಧರಣಿ ಕುಳಿತರು.)

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಮುಖ್ಯಮಂತ್ರಿಯವರು, ಸಾಲ ವಸೂಲಾತಿಯನ್ನು ನಿಲ್ಲಿಸುತ್ತೇವೆಂದು ಸ್ಪಷ್ಟವಾಗಿ ಹೇಳಲಿಲ್ಲ. ಬಲಾತ್ಕಾರದ ವಸೂಲಿ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ. ಅವರು ವಸೂಲಾತಿಯನ್ನು ನಿಲ್ಲಿಸುತ್ತೇವೆಂದು ಸ್ಪಷ್ಟವಾಗಿ ಏಕೆ ಹೇಳಬಾರದು ? ಅವರು ಒಂದೂವರೆ ಗಂಟೆ ಭಾಷಣ ಮಾಡಿದರು. ಅವರ ಮಾತಿಗೂ, ಕೃತಿಗೂ ಅರ್ಥ ಉಂಟೇ ?

ಅಧ್ಯಕ್ಷರು :– ಹನ್ನೊಂದು ತಿಂಗಳು ರಾಜ್ಯಭಾರ ಮಾಡಿದರೂ ಇತ್ಯರ್ಥ ಆಗಲಿಲ್ಲ, ಅಂತಹದರಲ್ಲಿ ಇದು ಒಂದೂವರೆ ಗಂಟೆಯಲ್ಲಿ ಇತ್ಯರ್ಥ ಆಗುವ ಪ್ರಶ್ನೆಯೇ ?

ಶ್ರೀ ಕೆ. ಪಿಜ್. ಪಾಟೀಲ್ :– ಪ್ರಜಾಪ್ರಭುತ್ವದ ನೀತಿಯನ್ನು ಅನುಸರಿಸಿ ಹೇಳಿದರೂ ಸಹ ಈ ರೀತಿ ಬೆದರಿಕೆ ಧೋರಣೆ ಹಾಕಿ ಅಸೆಂಬ್ಲಿಯನ್ನು, ಈ ಸದನವನ್ನು ಬಂದ್ ಮಾಡುತ್ತೇವೆಂದು ಹೇಳಿದರೆ ಹೇಗೆ ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ :– ಬಂದ್ ಮಾಡುತ್ತೇವೆಂದು ಹೇಳಲಿಲ್ಲ, ಈ ಸರ್ಕಾರ ರೈತರ ಬಗ್ಗೆ ಅನುಸರಿಸುತ್ತಿರುವ ಧೋರಣೆಗಳನ್ನು ವಿರೋಧ ಮಾಡುತ್ತೇವೆ, ಧರಣಿ ಕೂಡುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ.

ಅಧ್ಯಕ್ಷರು :– ಈಶ್ವರಪ್ಪನವರೇ, ನಿನ, ನೀವು ಬಂದ್ ಮಾಡುತ್ತೇವೆಂದು ಹೇಳಲಿಲ್ಲ. ನಾವೇ ಬಂದ್ ಆಗುತ್ತೇವೆಂದು ಹೇಳಿದಿರಿ.

ಶ್ರೀ ಕೆ. ಎಸ್. ಈಶ್ವರಪ್ಪ :– ರೈತರು ಬಂದ್ ಆಗುವುದು ಬೇಡ, ರೈತ ಬಂದ್ ಆಗುತ್ತಿದ್ದಾನೆ, ರೈತ ಬಂದ್ ಆಗದಹಾಗೆ ನಿಲ್ಲಿಸಬೇಕು ಸಾಲ ವಸೂಲಿ ನಿಲ್ಲಿಸಬೇಕೆಂದು ಹೇಳಿದೆವು. ಆದರೆ ಸಾಲ ವಸೂಲಿ ನಿಲ್ಲಿಸುತ್ತೇವೆಂದು ಒಂದು ಮಾತನ್ನೂ ಹೇಳಲಿಲ್ಲ. ವಸೂಲಿ ನಿಲ್ಲಿಸುತ್ತೇವೆಂದು ಹೇಳಬೇಕು.

ಅಧ್ಯಕ್ಷರು :– ಅವರು ಹೇಳುವುದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಚರ್ಚೆಗೆ ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಹಿರಿಯ ನಾಯಕರಾದಂಥ ಯಡಿಯೂರಪ್ಪನವರು ಏನು ಎತ್ತಿದ್ದಾರೆ, ಇದು ಪ್ರಥಮ ಸಲ ಅಲ್ಲ. ಪ್ರತಿಸಾರಿ ಈ ವಿಚಾರ ಎತ್ತುತ್ತಾರೆ. ಧರಣಿ ಕುಳಿತುಕೊಳ್ಳುತ್ತಾರೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಇನ್ನೇನು ಮಾಡಬೇಕು ಹೇಳಿ, ಇದರ ಬಗ್ಗೆ ಕೃತಿ ರೂಪದಲ್ಲಿ ಏನೂ ಆಗಿಲ್ಲ. ಆದುದರಿಂದ ಧರಣಿ ಕೂಡುವುದು ನಮ್ಮ ಕರ್ತವ್ಯ.

ಅಧ್ಯಕ್ಷರು :– ಈಶ್ವರಪ್ಪನವರೇ, ನಿಮ್ಮ ಪಕ್ಷ ಅಖಿಲ ಭಾರತ ಮಟ್ಟದಲ್ಲಿ ಒಂದು ತೀರ್ಮಾನ ತೆಗೆದು ಕೊಂಡಿದೆ. ಎಂದು ನಾನು ತಿಳಿದಿದ್ದೇನೆ. ಪಾರ್ಲಿಮೆಂಟರಿ ರೀತಿನೀತಿಗಳಿಗೆ ಅನುಸಾರವಾಗಿ ನಾವು ಕಾರ್ಯನಿರ್ವಹಣೆ ಮಾಡಿ. ಇತರರಿಗೆ, ಇತರ ರಾಜಕೀಯ ಪಕ್ಷಗಳಿಗೆ ಆದರ್ಶವಾಗಿ, ಮೇಲ್ಪಂಕ್ತಿಯನ್ನು ಹಾಕಿಕೊಡುತ್ತೇವೆಂದು ಒಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಅದರಲ್ಲಿ ಧರಣಿ ಕೂರುವುದಿಲ್ಲ ಎಂದು ಒಂದು ತೀರ್ಮಾನವನ್ನು ನೀವು ಮಾಡಿರುತ್ತೀರಿ ಎಂದು ನಿಮ್ಮ ಪಕ್ಷದ ನಾಯಕರು ನನಗೆ ತಿಳಿಸಿದರು. ಆದುದರಿಂದ ಅದರ ಬಗ್ಗೆ ನಿಮ್ಮಲ್ಲಿ ಪುನರ್ ತೀರ್ಮಾನ ಏನಾದರೂ ಆಗಿದೆಯೇ ?

ಶ್ರೀ ಕೆ. ಎಸ್. ಈಶ್ವರಪ್ಪ :– ನಮ್ಮ ಪಕ್ಷ ಇಡೀ ದೇಶದಲ್ಲಿ ಯಾವರೀತಿ ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಬೇಕೆಂಬುದನ್ನು ಸ್ಪಷ್ಟಪಡಿಸಲಾಗಿದೆ.

(ಗೊಂದಲ)

ಶ್ರೀ ಎಂ. ಮಹದೇವ್ : ನಿಮ್ಮಲ್ಲೇ ಎರಡು ಗುಂಪು ಆಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ರೈತರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕ ಹಕ್ಕು ಇಲ್ಲ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸಬೇಡಿ.

ಶ್ರೀ ಕೆ. ಎಸ್. ಈಶ್ವರಪ್ಪ :– ಕರ್ನಾಟಕದ ರೈತರಿಗೂ ಇಡೀ ರಾಷ್ಟ್ರದ ರೈತರಿಗೂ ವ್ಯತ್ಯಾಸ ಇದೆ. ಇಡೀ ದೇಶದಲ್ಲಿ ರೈತರ ಸಾಲ ಮನ್ನಾ ಆಗಬೇಕೆಂದು ಹೇಳಿ. ಎಲ್ಲಾ ಕಡೆ ರೈತರಿಗೆ ಸಾಲ ಮನ್ನಾ ಮಾಡಿರುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಆಗಿಲ್ಲ. ಇದು ಇಲ್ಲಿ ವಿಶೇಷ ವಿಷಯ ಎಂದು ಹೇಳಿ, ನಾನು ನಮ್ಮ ಕೇಂದ್ರ ಪಕ್ಷದ ಪದಾಧಿಕಾರಿಗಳ ಒಪ್ಪಿಗೆ ತೆಗೆದುಕೊಂಡಿದ್ದೇವೆ. ಇದೊಂದು ವಿಚಾರಕ್ಕೆ ಒಪ್ಪಿಗೆ ತೆಗೆದುಕೊಂಡಿದ್ದೇವೆ. ಇಡೀ ರಾಜ್ಯದಲ್ಲಿ ರೈತ ಹಾಳಾಗುವ ವಿಚಾರ ಬಂದ ತಕ್ಷಣ ನಾವು ನಮ್ಮ ಪಕ್ಷದ ಕೇಂದ್ರ ಸಮಿತಿ ಒಪ್ಪಿಗೆ ತೆಗೆದುಕೊಂಡು ರಾಜ್ಯದ ರೈತರ ಪರವಾಗಿ ಹೋರಾಟ ಮಾಡುತ್ತಿದ್ದೇವೆ.

ಅಧ್ಯಕ್ಷರು :– ಒಪ್ಪಿಗೆ ತೆಗೆದುಕೊಂಡಿದ್ದೀರಾ. ಆಲ್‌ರೈಟ್..... ಆರ್ಡರ್, ಆರ್ಡರ್.....

ಶ್ರೀ ಎಂ. ವೀರಪ್ಪ ಮೊಯಿಲಿ :– ಪ್ರತಿಸಾರಿ ಈ ವಿಚಾರ ಎತ್ತಿ ಧರಣಿ ಕುಳಿತುಕೊಳ್ಳುವುದು ಅರ್ಥಹೀನವಾಗುತ್ತಿದೆ. ನಮ್ಮ ಪಕ್ಷ ಇಲ್ಲಿದೆ, ಅನೇಕ ಪಕ್ಷಗಳು ಇಲ್ಲಿವೆ. ನಾವು ಇವತ್ತು ಇಲ್ಲಿ ಅಧಿಕಾರದಲ್ಲಿದ್ದೇವೆ. ವಿರೋಧ ಪಕ್ಷದಲ್ಲಿ ಜವಾಬ್ದಾರಿಯುತವಾದಂಥ ರಾಜಕೀಯ ಪಕ್ಷಗಳು ಕೂಡ ಇವೆ. ಬಿ. ಜೆ. ಪಿ. ಯವರು ನಮ್ಮ ಪಕ್ಷ ದವರು ಮಾತ್ರ ರೈತರ ವಿಷಯದಲ್ಲಿ ಆಸಕ್ತಿ ತೋರಿಸುತ್ತೇವೆ, ಧರಣಿ ಕುಳಿತುಕೊಂಡು ಸಾಧನೆ ಮಾಡುತ್ತೇವೆ ಎಂದು ಒಂದು ರೀತಿ ರಾಜಕೀಯ ಅಭಿಪ್ರಾಯ ಒಡಮೂಡಿಸಬೇಕೆಂದು, ಇದೇ ರಾಜಕೀಯ ಧೋರಣೆ ಎಂದು ತಿಳಿದುಕೊಂಡರೆ ಬಹುಶಃ ಪ್ರಜಾಪ್ರಭುತ್ವದ ರೀತಿಯಲ್ಲಿ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.ಏಕೆಂದರೆ ಕೇಂದ್ರ ಇದರ ಬಗ್ಗೆ ಒಂದು ನೋರ್ಮ್ಸ್ ತೆಗೆದುಕೊಂಡಿದೆ. ಒಂದು ಯೋಜನೆ ಇದೆ. ಅದರ ಒಂದು ಚೌಕಟ್ಟಿನಲ್ಲಿ ಮಾಡಿದೆ. ಅದನ್ನು ನಮ್ಮ ಸನ್ಮಾನ್ಯ ನಾಯಕರೂ ಹೇಳಿದ್ದಾರೆ. ಈ ಯೋಜನೆಯನ್ನು ಎಲ್ಲಾ ಸರಕಾರಗಳೂ ಒಪ್ಪಿಕೊಂಡಿವೆ. ಬಿ. ಜೆ. ಪಿ. ಯ ರಾಜ್ಯ ಸರಕಾರಗಳೂ ಒಪ್ಪಿಕೊಂಡಿವೆ. ನಾವೂ ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ನಾವು ಚಾಚೂ ತಪ್ಪದೆ ಅನುಷ್ಠಾನ ಮಾಡುತ್ತೇವೆ. ಅದನ್ನು ಹಿಂದಿನ ನಮ್ಮ ನಾಯಕರೂ ಹೇಳಿದ್ದಾರೆ. ಈಗಲೂ ಕೂಡ ನಮ್ಮ ನಾಯಕರು ಅದನ್ನು ಹೇಳಿದ್ದಾರೆ. ಇದು ರಾಜ್ಯ ಸರ್ಕಾರದ ಯೋಜನೆ ಅಲ್ಲ. ಇದು ಕೇಂದ್ರ ಸರ್ಕಾರದ ಯೋಜನೆ. ಇದು ಒಂದು ಸೀಮಿತವಾದ ಪ್ರಶ್ನೆ. ಕೇಂದ್ರದ ಯೋಜನೆಯು ಅನುಷ್ಠಾನವನ್ನು ಯಾವ ರೀತಿ ಮಾಡಿದ್ದೇವೆ. ಅದರಲ್ಲಿ ಏನಾದರೂ ದಾರಿ ತಪ್ಪಿದ್ದೇವೆಯೇ, ದಾರಿ ತಪ್ಪಿದ್ದರೆ ಅವರು

ಧರಣಿ ಮಾಡತಕ್ಕ ಹಕ್ಕು ಬಾಗೂ ಇದರ ಬಗ್ಗೆ ಪ್ರಶ್ನೆ ಎತ್ತತಕ್ಕ ಹಕ್ಕು ಇದೆ. ಆ ಯೋಜನೆಯನ್ನು ನಾವು ಅನು ಷ್ಠಾನ ಮಾಡಿದ್ದೇವೆ. ಬಾಹೂ ತಪ್ಪದೆ ಮಾಡಿದ್ದೇವೆ. ಆದರಲ್ಲಿ ಯಾವುದೇ ರೀತಿಯ ಡೀವಿಯೇಷನ್ ಕೂಡ ಮಾಡಿಲ್ಲ. ಇದರಲ್ಲಿ ನಮ್ಮ ತಪ್ಪು ಏನಿಲ್ಲದೆ. ಆದುದರಿಂದ ಇವರು ಧರಣಿ ಮಾಡಬೇಕಾದರೆ ದೆಹಲಿಯ ಬೋಟ್ ಕ್ಲಬ್‌ನಲ್ಲಿ ಮಾಡಬೇಕು. ಆದುದರಿಂದ ಕೇಂದ್ರ ಸರಕಾರದ ಈ ಯೋಜನೆಯನ್ನು ಬದಲಾವಣೆ ಮಾಡತಕ್ಕದ್ದು ಕೇಂದ್ರಕ್ಕೆ ಬಿಟ್ಟದ್ದು. ರಾಜ್ಯ ಸರ್ಕಾರ ಇದನ್ನು ಮಾಡಬೇಕೆಂದು ಹೇಳಿ ನಮಗೆ ಒತ್ತಾಯ ಹೇರತಕ್ಕದ್ದು ಪ್ರತಿ ಬಂಧಕವಾಗಿ ಧರಣಿ ಮಾಡತಕ್ಕದ್ದು, ಪ್ರತಿಭಟನೆ ಮಾಡತಕ್ಕದ್ದು ಏನಿದೆ ಇದು ಬಹುಶಃ ಈ ಸದನದ ಒಂದು ಸೌಜನ್ಯತೆಗೆ. ಘನತೆಗೆ ತಕ್ಕದ್ದು ಎಂದು ಹೇಳಿ ಯಾರಿಗೂ ಅಭಿಪ್ರಾಯ ಬರುವುದಿಲ್ಲ. ಅದನ್ನು ದಯವಿಟ್ಟು ಆಲೋಚನೆ ಮಾಡಬೇಕು. ವಿರೋಧನೆಯದಾಗಿ ನಮ್ಮ ಪ್ರೊಫೆಸರ್‌ರವರು ಒಂದು ಮಾತು ಹೇಳಿದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಬರಗಾಲ ಸಮಸ್ಯೆ ಇದೆ. ಮೂಲಭೂತವಾದ ಸಮಸ್ಯೆ ಅದು. ಅದಕ್ಕೆ ನಮ್ಮ ನಾಯಕರು ಬಾಗೂ ಪ್ರತಿಯೊಬ್ಬರು ಒಂದೆಡೆ ಕುಳಿತುಕೊಂಡು ಎಲ್ಲಾ ರಾಜಕೀಯ ಪಕ್ಷಗಳು ಕುಳಿತುಕೊಂಡು ರಾಜ್ಯಕ್ಕೆ ಸೀಮಿತವಾದಂತೆ ಆ ಯೋಜನೆಯನ್ನು ಯಾವ ರೀತಿಯಲ್ಲಿ ಮಾಡಬೇಕು ? ರೈತನನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯ ಏನಿದೆ ? ಇವೆಲ್ಲವುಗಳನ್ನು ಮಾಡುವುದಕ್ಕೆ ನಮಗೆ ಅವಕಾಶ ಕೊಡಿ. ಅವರು ಇತ್ತೀಚೆಗೆ ನಾಯಕರಾಗಿ ದ್ದಾರೆ. ಸರ್ಕಾರ ರೈತರ ಬಗ್ಗೆ ಹೊಸ ಧೋರಣೆ ತಳೆದಿದೆ. ಈ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರ ಕೂಡ ಆಲೋ ಚನೆ ಮಾಡತಕ್ಕಂಥಾದ್ದಕ್ಕೆ ಅವಕಾಶ ಇದೆ. ಅದು ಬಿಟ್ಟು ಈ ಸದನ ಸೇರಿದ ಕೂಡಲೇ ನಮ್ಮ ಮಾನ್ಯ ಸದಸ್ಯ ರಾದ ಯಡಿಯೂರಪ್ಪನವರು ಪ್ರತಿಭಟನೆ ಮಾಡಿ ಅವರು ಹೇಳಿದಂತೆ ಆಗಬೇಕು ಮತ್ತು ಆ ಬಗ್ಗೆ ಆಶ್ವಾಸನೆ ಕೊಡಬೇಕು ಇದು ಒಂದು ರೀತಿಯಲ್ಲಿ ಭಯೋತ್ಪಾದನ ಮಾಡತಕ್ಕಂಥಾದ್ದಕ್ಕೆ ಸದನದಲ್ಲಿ ಯಾವುದೇ ಗೌರವ ಮತ್ತು ಘನತೆ ಬರುವುದಿಲ್ಲ. ಅದು ಕಳಕಾಯ್ರಾಯ ಸಹ ಆಗುವುದಿಲ್ಲ. ರಚನಾತ್ಮಕವಲ್ಲದೆ ಇರತಕ್ಕಂಥಾದ್ದಕ್ಕೆ ಪ್ರತಿ ಭಟನೆ ಮಾಡಬೇಕು ಎಂದು ಆದರೆ ಮಾಡಲಿ ಅದನ್ನು ಈ ಸದನ ಬಹುಶಃ ಒಪ್ಪಿಕೊಳ್ಳುವುದಕ್ಕೆ ಆಗುವು ದಿಲ್ಲ. ತಮ್ಮ ನೀತಿ ಏನಿದೆ ಅದು ಬಹುಶಃ ಒಳ್ಳೆಯ ನೀತಿ ಅಲ್ಲ. ಅದು ಪ್ರಜಾಪ್ರಭುತ್ವ ನೀತಿ ಸಹ ಅಲ್ಲ. ಇದು ಒಂದು ರೀತಿಯಲ್ಲಿ ಸರ್ವಾಧಿಕಾರಿ ಮನೋವೃತ್ತಿಯಾಗುತ್ತದೆ. ಫ್ಯಾಸಿಸ್ಟ್ ಬಿ. ಜೆ. ಪಿ. ನೀತಿ ಆಗುವುದಾ ದರೆ ಬಹುಶಃ ಈ ಸದನದಲ್ಲಿ ಅದು ಕಾರ್ಯಗತ ಮಾಡುವುದು ಬಹಳ ಕಷ್ಟವಾಗುತ್ತದೆ. ಬಹುಶಃ ಆ ರೀತಿ ಫ್ಯಾಸಿಸ್ಟ್ ಮನೋವೃತ್ತಿಯ ಬಲಪ್ರಯೋಗ ಮಾಡಿ ಪ್ರಜಾಪ್ರಭುತ್ವವನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದರೆ ಅದು ಆಗುವುದಿಲ್ಲ. ನಮ್ಮ ಬಿ. ಜೆ. ಪಿ. ಮುಖಂಡರಾದ ಶ್ರೀ ಯಡಿಯೂರಪ್ಪನವರು ರಾಜ್ಯದಲ್ಲಿ ಒಂದು ನೀತಿ ರಾಷ್ಟ್ರದಲ್ಲಿ ಒಂದು ನೀತಿ ತರಬೇಕೆಂದು ಆದರೆ ಅದನ್ನು ಈ ರಾಜ್ಯದ ಜನತೆ ಖಂಡಿತವಾಗಿ ಒಪ್ಪಿ ಕೊಳ್ಳುವದಿಲ್ಲವೆನ್ನುವ ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷ ಪ್ರಜಾರಾದ ದೃಷ್ಟಿಯಿಂದ ಈ ಕೆಲಸ ಮಾಡು ತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ನಾವು ಹೊಸದಾಗಿ ಇವತ್ತು ಈ ಮಾತು ಹೇಳುತ್ತಿಲ್ಲ. ಬಹಳ ದಿವಸಗಳಿಂದ ಈ ಕೂಗನ್ನು ನಾವು ಕೂಗುತ್ತಿದ್ದೇವೆ. ನಮ್ಮದು ಇದು ರೈತರ ಬಗ್ಗೆ ಇರುವ ಧೋರಣೆ ಆದರೆ ರೈತರ ಬಗ್ಗೆ ನಿಮ್ಮ ಧೋರಣೆ ಏನು ? ತಮ್ಮ ಧೋರಣೆ ವೀರೇಂದ್ರ ಪಾಟೀಲರನ್ನು ತೆಗೆದು ತಾವು ಬಂದಿರಿ. ಆಂಧ್ರಪ್ರದೇಶದಲ್ಲಿ ಚನ್ನಾರೆಡ್ಡಿ ಯವರನ್ನು ತೆಗೆದರು. ಆದರೆ ನಾವು ಈ ಮಾತನ್ನು ಹೊಸದಾಗಿ ಹೇಳು ತ್ತಿಲ್ಲ. ಉತ್ತರದಲ್ಲಿ ನಮ್ಮ ಸರ್ಕಾರ ಈ ಕೆಲಸ ಮಾಡಿದೆ. ನೀವು ಆ ಕೆಲಸ ಮಾಡಿ ಒಳ್ಳೆಯ ಹೆಸರು ತೆಗೆದು ಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ನಾವೇನು ಅನ್ಯಾಯ ಮಾಡಿ ಎಂದು ಹೇಳುತ್ತಿಲ್ಲ. ರೈತರಿಗೆ ನ್ಯಾಯ ಕೊಡಿ ಎಂದು ಕೇಳುತ್ತಿದ್ದೇವೆ. ಇವತ್ತಿನಿಂದ ನಮ್ಮ ಧೋರಣೆ ಇದು. ಸರ್ಕಾರದ ಧೋರಣೆ ಏನು ? ನಾವು ವೀರೇಂದ್ರ ಪಾಟೀಲರ ಕಾಲದಿಂದಲೂ ಹೇಳುತ್ತಿದ್ದೇವೆ. ನನಗೆ ತಿಳಿದಹಾಗೆ ನಿಮ್ಮ ಧೋರಣೆ ವೀರೇಂದ್ರ ಪಾಟೀಲರನ್ನು ತೆಗೆದು ತಾವು ಬಂದಿದ್ದು ಆಂಧ್ರದಲ್ಲಿ ಚನ್ನಾರೆಡ್ಡಿಯವರನ್ನು ತೆಗೆದರು. ಇನ್ನು ಪವಾರ್‌ರವರನ್ನು ಯಾವಾಗ ತೆಗೆಯುತ್ತೀರಿ. ಇದು ಯಾವ ಧೋರಣೆ ?

ಅಧ್ಯಕ್ಷರು :– ಚನ್ನಾರೆಡ್ಡಿ ಮತ್ತು ಪವಾರ್‌ರವರನ್ನು ಬಿಟ್ಟುಬಿಡಿ. ತಾವು ರೈತರ ಸಾಲ ಮನ್ನಾ ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ :– ನಮ್ಮ ಧೋರಣೆ ಇದು. ನಿಮ್ಮ ಧೋರಣೆ ಏನು ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಈಶ್ವರಪ್ಪನವರೇ ಯಾರ್ಯಾರು ಯಾರ್ಯಾರ ಸರ್ಕಾರ ತೆಗೆದರು ಆ ಮಾತನ್ನು ಬಿಟ್ಟು ಬಿಡಿ. ಆ ಬಗ್ಗೆ ಮಾತನಾಡುತ್ತಾ ಹೋದರೆ ಅದು ಬೇರೆ ಬೇರೆ ಅರ್ಥ ಬರುತ್ತದೆ. ಇಡಕ್ಕೂ ವೀರೇಂದ್ರ ಪಾಟೀಲರ ಸರ್ಕಾರ ತೆಗೆದಿದ್ದಕ್ಕೂ ಸಂಬಂಧ ಇಲ್ಲ. ಅದು ನಮ್ಮ ಪಕ್ಷದ ಆಂತರಿಕ ವಿಚಾರ. ನಾವು ನಿಮ್ಮ ಪಕ್ಷದ ವಿಚಾರವನ್ನು ಮುಟ್ಟಲಿಕ್ಕೆ ಹೋಗುವುದಿಲ್ಲ. ನಾವು ಅದನ್ನೆಲ್ಲಾ ಮಾತನಾಡುತ್ತಾ ಹೋದರೆ ಅದು ಬೇರೆ ಸಬ್ಜೆಕ್ಟ್ ಆಗುತ್ತದೆ. ನಾವು ಹಾಗೆ ಮಾತನಾಡುತ್ತಾ ಹೋದರೆ ತಾವು ರೈತರನ್ನೇ ತೆಗೆದಿರಿ ಎನ್ನುವ

ತೀರ್ಮಾನಕ್ಕೆ ಬರಬೇಕಾಗುತ್ತದೆ. ಆ ವಿಚಾರ ಅಲ್ಲ. ಮಾನ್ಯ ಅಧ್ಯಕ್ಷರೇ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಎಷ್ಟೇ ಮಾತನಾಡಿದರೂ ಕೂಡ ಈ ಸ್ಕೀಮ್ ಗೌರ್ನಮೆಂಟ್ ಆಫ್ ಇಂಡಿಯಾದವರದ್ದು ಎಂದು ನಾನು ಪದೇ ಪದೇ ಹೇಳಿದ್ದೇನೆ. ಅವರು ಏನು ಷರತ್ತುಗಳನ್ನು ವಿಧಿಸಿದ್ದಾರೋ ಅವೆಲ್ಲವನ್ನೂ ಹೇಳಬೇಕು. ಇದು ನಮ್ಮದು ಸ್ಕೀಮ್ ಅಲ್ಲ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಒಂದು ಸ್ಕೀಮ್ ಇದೆ. ಬ್ಯಾಂಕ್‌ಗಳಿಗೆ ಇದನ್ನು ತೆಗೆದುಕೊಂಡು ಹೋದರೂ ಸಹ ನಾವು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಬ್ಯಾಂಕ್‌ಗಳು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. Banks are under the control of the Reserve Bank. NABARD is there, Government of India is there.

ಲೀಗಲ್ ವಿಷಯ ಬಿಟ್ಟು ಸುಮ್ಮನೆ ಹೇಳುತ್ತಾ ಹೋದರೆ ಏನಾಗುತ್ತದೆ ? ನೀವೇ ಇದನ್ನು ವಿಚಾರ ಮಾಡಿಕೊಳ್ಳಿ. ಇದರ ಮೇಲೆ ನಿಮಗೆ ಬಿಟ್ಟಿರತಕ್ಕ ವಿಚಾರ. ಅಧ್ಯಕ್ಷರಿಗೆ ಬಿಟ್ಟಿರತಕ್ಕ ವಿಚಾರ. ಈ ಪಾಯಿಂಟ್ ಮೇಲೆ ಸುಮ್ಮನೆ ಮಾತನಾಡಿದರೆ ಉಪಯೋಗವಾಗುವುದಿಲ್ಲ. ಸರ್ಕಾರ ಏನು ಮಾಡಿದೆ ಎಂದು ಕೇಳಿದ್ದೀರಿ. 50 ಪರಸೆಂಟ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೇವೆ. ಇನ್ನೇನು ಹೇಳಬೇಕು ? ದಯವಿಟ್ಟು ತಾವೇ ವಿಚಾರ ಮಾಡಿ. ಯಾರು-ಯೇ ಆದರೂ ಅದು ಒಂದುವಹಾಗಿಲ್ಲ. ಅದನ್ನು ಅರ್ಥ ಮಾಡಿಕೊಂಡು ಇಲ್ಲಿ ಚರ್ಚೆ ಮಾಡಿದರೆ ಸಾಕು. ನಾನು ಪ್ರೊಫೆಸರ್‌ರವರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಡಿ. ನಂಜುಂಡಸ್ವಾಮಿ :– ನಾನು ಕಾಲಹರಣ ಮಾಡುವವನಲ್ಲ. ಒಂದು ನಿಮಿಷ. ಸಾಲ ಮನ್ನಾ ಮಾಡುವ ಬಗ್ಗೆ ವಿಷಯ ತೆಗೆದು ರೈತನ ಬಗ್ಗೆ ಚರ್ಚೆ ಮಾಡುವುದು ಬೇಡ ಎಂದು ಹೇಳಿದವನು ನಾನು. ಸುಮ್ಮನೆ ಕಾಲಹರಣ ಮಾಡಿ ಯಾವ ಯಾವ ದಿಕ್ಕಿನಲ್ಲೋ ಚರ್ಚೆ ಹೋಗುತ್ತಿದೆ. ಇದರಿಂದ ರೈತನಿಗೆ ಇನ್ನೂ ಕಷ್ಟವಾಗುತ್ತದೆ. ರೈತರ ಸಮಸ್ಯೆಯನ್ನು ಬಗೆಹರಿಸುವ ದಿಕ್ಕಿನಲ್ಲಿ ಹೋಗುವ ನಮ್ಮ ಪೊಕೆಗಾರಿಕೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಾನು ಸಭಾಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಅಧಿವೇಶನದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. Standing Committee on Agricultural Prices and Policies ಅದನ್ನು ರಚನೆ ಮಾಡಬೇಕು. ಅದನ್ನು ದಯವಿಟ್ಟು ಮಾಡಿ. ಬೆಲೆಯನ್ನು ನಿಗದಿ ಮಾಡುವುದು ಕೇಂದ್ರದ ಜವಾಬ್ದಾರಿಯೆಂದು ನೀವು ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಬೇಡ. ನಾವೆಲ್ಲರೂ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡೋಣ. ಬೆಳೆ ಬೆಳೆಯುವುದಕ್ಕೆ ಪ್ರೈಸ್ ಇಂಡೆಕ್ಸ್ ಪ್ರಕಾರ ಎಷ್ಟು ಖರ್ಚು ಬರುತ್ತದೆಂದು ಒಂದೇ ಪ್ರಕಟಣೆ ಮಾಡಿ ಸ್ವಾಮಿ. ಆದರಿಂದ ಸತ್ಯ ಜಗತ್ತಿಗೆ ಗೊತ್ತಾಗಲಿ.

ಶ್ರೀ ಎಸ್. ಬಂಗಾರಪ್ಪ :– ಈ ವಿಚಾರ ಒಂದೆಯೂ ಕೂಡ ಸದನದಲ್ಲಿ ಒಂದಿತ್ತು. We are not averse to that idea ಪತಕ್ಕೆಂದರೆ, ಒಂದೇ ಒಂದು ವಿಚಾರ of course, it is different altogether. ಸಾಲ, ಗೀಲ ವಿಚಾರದಲ್ಲಿ better we close this...
ನನ್ನ ಸಲಹೆ ಏನೆಂದರೆ, ಚರ್ಚೆ ಮಾಡಿದರೆ ಅದು ಎಲ್ಲೋ ಬಂದು ನಿಲ್ಲುತ್ತದೆ. ತಾವು ಏನು ಹೇಳುತ್ತಿದ್ದೀರಿ. ವೈಜ್ಞಾನಿಕ ಆಧಾರದ ಮೇಲೆ ನ್ಯಾಯವಾದ ಬೆಲೆಯನ್ನು ಕೊಡಬೇಕು. ಆದರಲ್ಲಿ ನಮ್ಮ ಭಿನ್ನಾಭಿಪ್ರಾಯ ಇಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ನ್ಯಾಯವಾದ ನಿಮ್ಮ ಬೆಲೆ ನಮಗೆ ಬೇಡ. Scientifically calculated price. ನಿಮ್ಮ ನ್ಯಾಯ ನಮಗೆ ಬೇಡ ಸ್ವಾಮಿ. ನೀವು ಯಾರು ನಮಗೆ ನ್ಯಾಯ ಕೊಡುವುದಕ್ಕೆ? ನಾವು ಭಿಕ್ಷೆ ಬೇಡುವವರಲ್ಲ. ನಮಗೆ ಬೇಕಾಗಿರುವುದು using same costing methodology which is used in other sectors.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪ್ರೊಫೆಸರ್‌ರವರು ಹೇಳತಕ್ಕಂತಾದ್ದು ಒಂದೇ ಒಂದು ವಿಚಾರ. ಇವತ್ತು ಸಪೋರ್ಟ್ ಪ್ರೈಸ್, ಇದು ಅವರಿಗೂ ಗೊತ್ತಿದೆ. ತಮಗೂ ಗೊತ್ತಿದೆ. ಇದು ಸತ್ಯದ ವಿಚಾರ. ಇನು ಹೊರಗಡೆ ಬರಬೇಕು.

Prof. M. D. Nanjundaswamy : I don't want support price. We don't want. I want scientifically calculated price using the same costing methodology which is used in other sectors.

ಶ್ರೀ ಎಸ್. ಬಂಗಾರಪ್ಪ :– ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ನೀವು ಸಪೋರ್ಟ್ ಮಾಡಬೇಡಿ. ನನ್ನನ್ನು ನೀವು ರಕ್ಷಣೆ ಮಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ, ಎಲ್ಲಾ ಕಾಲದಲ್ಲೂ ಬೆಲೆ ನಿರ್ಧಾರ ಮಾಡುವುದು ಕೇಂದ್ರ ಸರ್ಕಾರದವರು. ಇದು ತಮಗೂ ಗೊತ್ತಿದೆ. How this price is fixed ? There should be a scientific approach if I understood you. I am trying to meet your point...

ಈ ವಿಚಾರದಲ್ಲಿ, ಅಂದರೆ ನ್ಯಾಯವಾದ ಬೆಲೆ ಕೊಡತಕ್ಕಂಥ ವಿಚಾರದಲ್ಲಿ ಈ ಮಟ್ಟದಲ್ಲಿ ಚರ್ಚೆ ಮಾಡಿದರೆ ಹೆಚ್ಚಾಗಿ ಆ ವಿಚಾರದ ಮೇಲೆ ಬೆಳಕನ್ನು ಚೆಲ್ಲತಕ್ಕಂಥ ಕೆಲಸ ಮಾಡಬಹುದೇ ಹೊರತು ಬೆಲೆ ಕೊಡತಕ್ಕಂಥ ವಿಚಾರದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಜಸ್ಟ್ ಅಕಾಡೆಮಿಕ್ ಇಂಟರೆಸ್ಟ್‌ಗೋಸ್ಕರ ಚರ್ಚೆ ಮಾಡುವುದಕ್ಕೆ ಸೀಮಿತಗೊಳಿಸಬೇಕಾಗುತ್ತದೆ.

Prof. M. D. Nanjundaswamy : It is not for academic interest. Not at all. Definitely not at all.

Shri D. B. Chandregowda : I would like to know from the Chair what is that we are discussing ? Let us know, so that we can also contribute to it.

ಶ್ರೀ ಎಸ್. ಬಂಗಾರಪ್ಪ :– ಕಬ್ಬಿನ ಸೆಸ್ ಬರುತ್ತದೆ. ಅದರ ಬಗ್ಗೆ ಚರ್ಚೆಗೆ ಬಂದಾಗ ಚರ್ಚೆ ಮಾಡೋಣ. These are all matters that are to be discussed, That is a different subject altogether.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ವಿರೋಧ ಪಕ್ಷದ ನಾಯಕರಿಗೆ ಚರ್ಚೆ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದರ ಬಗ್ಗೆ ಸ್ವಲ್ಪ ಸಂಶಯ ಬಂದಿರುವುದರಿಂದ ನಾನೇ ಕ್ಲಾರಿಫೈ ಮಾಡುತ್ತೇನೆ. ಪತಕ್ಕೋಸ್ಕರ ರೈತರ ಸಾಲವನ್ನು ರದ್ದು ಮಾಡುತ್ತಿದ್ದೀರಿ ಎನ್ನುವುದನ್ನು ನಾನು ಹೇಳಿದ್ದು. ಯಾವ ಸರ್ಕಾರವೂ ಹೇಳಿಲ್ಲ, ಕೇಂದ್ರ ಸರ್ಕಾರವೂ ಹೇಳಿಲ್ಲ, ರಾಜ್ಯ ಸರ್ಕಾರವೂ ಹೇಳಿಲ್ಲ. ಯಾವ ಕಾರಣಕ್ಕೋಸ್ಕರ ರದ್ದು ಮಾಡುತ್ತೀರಾ ? ಯಾವ ವೋಟಿಂಗ್‌ಗೋಸ್ಕರ ರದ್ದು ಮಾಡುತ್ತೀರಾ? ವೋಂಟಿಂಗ್ ಗೋಸ್ಕರ ರದ್ದು ಮಾಡುತ್ತೀರೋ, ಯಾವ ಕಾರಣಕ್ಕೆ ರದ್ದು ಮಾಡುತ್ತೀರಿ ? ಯಾವ ಕಾರಣಕ್ಕೆ ರದ್ದು ಮಾಡುತ್ತೀರಿಂಬ ಕಾರಣವನ್ನು ಕೊಡಬೇಕು. ನಾವು ರೈತ ಬೆಳೆದಿದ್ದಕ್ಕೆ ಸರಿಯಾದ ಬೆಲೆಯನ್ನು ಕೊಟ್ಟಿದ್ದೇವೆಯೋ ಅಥವಾ ಮೋಸದ ಬೆಲೆಯಲ್ಲಿ ಅವನನು ಮೋಸ ಮಾಡಿದ್ದೇವೆಯೋ ?

ಶ್ರೀ ವಾಟಾಳ್ ನಾಗರಾಜ್ :– ಈ ಸಭೆ ಕ್ರಮಬದ್ಧವಾಗಿದೆಯೇ ಎಂಬುದನ್ನು ನಮಗೆ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಸಭೆ ಕ್ರಮಬದ್ಧವಾಗಿದೆ. ಆದರೆ ಸಬ್ಜೆಕ್ಟ್ ಬೇರೆ ಇದೆ.

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರೇ, ಧರಣಿ ಕುಳಿತಿದ್ದಾಗ ಸಭೆ ನಡೆಸಬಹುದೇ ಬಿಡಬಹುದೇ ತಾವೇ ಹೇಳಿ.

ಅಧ್ಯಕ್ಷರು :– ನೀವೇ ಹೇಳಿ, ಸಭೆ ಕ್ರಮವಾಗಿದೆಯೇ ಅಥವಾ ಅಕ್ರಮವಾಗಿದೆಯೇ ಒಂದು ಪಕ್ಷ ಸಭೆ ಅಕ್ರಮವಾಗಿದ್ದರೆ ನಾನು ಏನು ಮಾಡುವುದು ತಾವು ಹೇಳಿ.

ಶ್ರೀ ವಾಟಾಳ್ ನಾಗರಾಜ್ :– ಸಭೆ ಅಕ್ರಮವಾಗಿದ್ದರೆ ಸಭೆಯನ್ನು ಮುಂದೂಡಿ.

ಅಧ್ಯಕ್ಷರು :– ಸಭೆ ಈಗ ಮುಂದುವರಿದು ಪುನಃ 3 ಗಂಟೆಗೆ ಸೇರುವುದು.

(ಸಭೆಯು1–57 ಕ್ಕೆ ಮೇಲೆದ್ದು ಮತ್ತೆ 3–15 ನಿಮಿಷಗಳಿಗೆ ಸಮಾವೇಶಗೊಂಡಿತು.)

(ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು.)

ಉಪಾಧ್ಯಕ್ಷಣಿಯವನು :– ಈಗ ಗಮನ ಸೆಳೆಯುವ ಸೂಚನೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಸಭಾಧ್ಯಕ್ಷಣಿಯವರೇ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಮಗೆ ಸ್ಪಷ್ಟವಾದ ಆಶ್ವಾಸನೆ ಕೊಡಲಿಲ್ಲ.....

ಉಪಾಧ್ಯಕ್ಷಣೆಯವರು :– ಬೆಳಿಗ್ಗೆ ಇದರ ಬಗ್ಗೆ ತಾವು ಮಾತನಾಡಿದ್ದೀರಿ ಸರ್ಕಾರದವರು ಸಹ ಉತ್ತರ ಕೊಟ್ಟು ತಮ್ಮ ನಿಲುವು ಏನು ಎಂದು ಸ್ಪಷ್ಟಪಡಿಸಿದ್ದಾರೆ. ಅದು ತಮಗೂ ಗೊತ್ತಿದೆ. ಆದ್ದರಿಂದ ಈ ಸಭೆ ಸುಗಮವಾಗಿ ನಡೆಯುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷಣೆಯವರೇ ತಾವು ಸ್ವಲ್ಪ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :– ಬೆಳಿಗ್ಗೆ ತಮ್ಮ ಲೀಡರ್ ಮಾತನಾಡಿದ್ದಾರೆ ಅದಕ್ಕೆ ಸರ್ಕಾರದ ಉತ್ತರ ಸಹ ಕೊಟ್ಟಿದೆ. ಸರ್ಕಾರದ ನಿಲುವು ತಮಗೆ ಗೊತ್ತಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಮುಖ್ಯಮಂತ್ರಿಗಳು ನಮಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಆವರು ಸ್ಪಷ್ಟವಾದ ಉತ್ತರ ಕೊಡದೆ ಇದ್ದುದಕ್ಕಾಗಿ ನಮ್ಮ ನಾಯಕರು ಧರಣಿ ಕುಳಿತು ಕೊಂಡಿದ್ದಾರೆ. ನಾವು ಧರಣಿ ಕುಳಿತುಕೊಳ್ಳುವುದು ಬೇಡ ಎಂದಾದರೆ ನಮಗೆ ಸ್ಪಷ್ಟವಾದ ಉತ್ತರ ಕೊಡಿ. ಅಲ್ಲಿ ಚೆಕ್ಸ್ ಪೋಸ್ಟ್ ಆಗುತ್ತಿವೆ. ರೈತರಿಂದ ಸಾಲ ವಸೂಲಾತಿ ನಿಲ್ಲಿಸಿ ಇದರ ಬಗ್ಗೆ ಗಮನ ಕೊಟ್ಟು ಸ್ಪಷ್ಟವಾದ ಉತ್ತರ ಕೊಡಲಿ.

ಉಪಾಧ್ಯಕ್ಷರು :– ಅವರು ಉತ್ತರ ಕೊಟ್ಟಿದ್ದಾರೆ. ಶ್ರೀ ಟಿ. ಬಿ. ಜಯಚಂದ್ರ ತಾವು ಮಾನ್ಯ ಮಂತ್ರಿಗಳ ಗಮನಕ್ಕೆ ತನ್ನಿರಿ.

ಗಮನ ಸೆಳೆಯುವ ಸೂಚನೆ.

ವಿಷಯ :– 1) ರಾಜ್ಯದಲ್ಲಿ ಕೊಬ್ಬರಿ ಬೆಲೆ ಇಳಿದಿರುವುದರಿಂದ ರೈತರಿಗೆ ಆಗಿರುವ ತೊಂದರೆ.

ಶ್ರೀ ಟಿ. ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೊಬ್ಬರಿ ಬೆಲೆ ಇಳಿದಿರುವುದರಿಂದ ರೈತರಿಗೆ ಆಗಿರುವ ತೊಂದರೆ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ನಾವು ಸದನದಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳ ಮನೆಯ ಮುಂದೆ ಸಹ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು :– ತಾವು ಈ ರೀತಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುವುದು ಸರಿಯಲ್ಲ. ಅಧ್ಯಕ್ಷರ ಅಪ್ಪಣೆ ಇಲ್ಲದೆ ಯಾರು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.)

ಉಪಾಧ್ಯಕ್ಷರು :– ತಾವು ಸಭೆಯ ಕಾರ್ಯಕಲಾಪಗಳಿಗೆ ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ. ತಾವು ಕುಳಿತುಕೊಳ್ಳಬೇಕು. ಬೆಳಿಗ್ಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಲಿ.

† ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :– ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದ ಬಗ್ಗೆ ಸರ್ಕಾರ ಗಮನ ಹರಿಸಿದ್ದು ದಿ. 25-8-1990 ರಲ್ಲಿ ಮಾನ್ಯಮುಖ್ಯ ಮಂತ್ರಿಗಳು ಭಾರತದ ಪ್ರಧಾನ ಮಂತ್ರಿಗಳಿಗೆ ಆರೆ ಸರ್ಕಾರಿ ಪತ್ರವನ್ನು ಬರೆದು ಈಗಾಗಲೇ ಎಣ್ಣೆ ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಪಡಿಸಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಕ್ವಿಂಟಲ್ ಒಂದಕ್ಕೆ 1,600–00ರೂ. ಗಳಂತೆ ಕೊಳ್ಳುತ್ತಿದ್ದು, ಇದೇ ರೀತಿ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಇನ್ನು ಹೆಚ್ಚಿನ ಗುಣಮಟ್ಟದ ಒಣ ಕೊಬ್ಬರಿಗೂ ಕನಿಷ್ಠ ಬೆಲೆ ರೂ. 2,500–00 ಗಳಿಗೆ ನಿಗದಿಪಡಿಸಿ, ರೈತರಿಂದ ಒಣ ಕೊಬ್ಬರಿಯನ್ನೂ ಸಹ ಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದ್ದರು. ಸದರಿ ಮನವಿಯನ್ನು ಪುರಸ್ಕರಿಸಿ ಭಾರತ ಸರ್ಕಾರವು ಕೃಷಿ ಬೆಲೆಗಳನ್ನು ನಿಗದಿಪಡಿಸುವ ಆಯೋಗದ ಅಧ್ಯಕ್ಷರಾದ ಪ್ರೊ.ಎಸ್. ಎಸ್. ಜೋಲ್, ಸದಸ್ಯ ಕಾರ್ಯದರ್ಶಿಯವರಾದ ಡಾ. ಡಿ.ಎಸ್. ತ್ಯಾಗಿ ಮತ್ತು ನಿರ್ದೇಶಕರಾದ ಡಾ. ಆರ್. ಸಿ. ಸಿನ್ಹಾ ರವರನ್ನೊಳಗೊಂಡ ನಿಯೋಗವನ್ನು ಬೆಂಗಳೂರಿಗೆ ಕಳುಹಿಸಿದ್ದು, ದಿ. 13–12–1990 ರಂದು ಕರ್ನಾಟಕ ರಾಜ್ಯ ಸರ್ಕಾರದೊಡನೆ ನಡೆಸಿದ ಸಭೆಯಲ್ಲಿ ಎಣ್ಣೆ ಕೊಬ್ಬರಿಗೆ ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆ ರೀತಿಯಲ್ಲೇ, ರಾಜ್ಯದಲ್ಲಿ ಉತ್ಪಾದನೆಯಾಗುವ ಒಣ ಕೊಬ್ಬರಿಗೂ ಸಹ ಕ್ವಿಂಟಲ್ ಒಂದಕ್ಕೆ 2,500–00 ರೂ. ಗಳ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸ ಬೇಕೆಂದು ಭಾರತ ಸರ್ಕಾರದ ಆಯೋಗವನ್ನು ಕರ್ನಾಟಕ ಸರ್ಕಾರವು ಒತ್ತಾಯಿಸಿದ್ದು, ಇದರ ಅವಶ್ಯಕತೆಯನ್ನು ಸಹಾ ಮನದಟ್ಟು ಮಾಡಲಾಗಿದೆ. ಆಯೋಗವು ಇದರ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದೆ.